**ಕರ್ನಾಟಕ ಸರ್ಕಾರ**

**ರೇಷ್ಮೆ ಇಲಾಖೆ**

ಸಂ:ಯೋ/PS3/PMKSY/ಮಾರ್ಗಸೂಚಿ/48/2021-22

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ
ಬೆಂಗಳೂರು , ದಿನಾಂಕ:29.10.2021

<u>ಸುತ್ತೋಲೆ</u>

ವಿಷಯ: 2021-22ನೇ ಸಾಲಿನ ಕೇಂದ್ರಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-49(106) ರಡಿ ಮಾರ್ಗಸೂಚಿ ನೀಡುತ್ತಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ರೇಷ್ಮೆ/43/ರೇಕೃವಿ/2021 ದಿನಾಂಕ: 16.04.2021
2. ತೋಟಗಾರಿಕೆ ಇಲಾಖೆ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ತೋಇ/ತೋಜಂನಿ(ಹನಿ)/ಹಿಸತೋನಿ/ಸತೋಅ-3/12/2021-22 ದಿನಾಂಕ: 21.08.2021

*************

2021-22ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-49(106) ರಡಿ ಹನಿ ನೀರಾವರಿ ಅಳವಡಿಕೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಉಲ್ಲೇಖ (1) ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.

ಉಲ್ಲೇಖ (2) ರಲ್ಲಿ ತೋಟಗಾರಿಕೆ ಇಲಾಖೆ ಬೆಂಗಳೂರು ರವರು ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮಾರ್ಗಸೂಚಿಯನ್ನು ನೀಡಿರುತ್ತಾರೆ. ಮುಂದುವರೆದಂತೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಲೆಕ್ಕಶೀರ್ಷಿಕೆ 2851-00-107-1-49(106) ರಡಿ ಹನಿ ನೀರಾವರಿ ಅಳವಡಿಕೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮಾರ್ಗಸೂಚಿಯನ್ನು ನೀಡಲಾಗಿದ್ದು, ನೀಡಲಾಗಿರುವ ಮಾರ್ಗಸೂಚಿಯನ್ವಯ ನಿಯಮಾನುಸಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಂತೆ ಸೂಚಿಸಿದೆ ಹಾಗೂ ಪತ್ರದೊಂದಿಗೆ ಮಾರ್ಗಸೂಚಿಯನ್ನು ಅಡಕಗೊಳಿಸಿದೆ.

Rapu

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

1. ಎಲ್ಲಾ ಜಿಲ್ಲಾ ಪಂಚಾಯತ್, ರೇಷ್ಮೆ ಉಪನಿರ್ದೇಶಕರುಗಳು, ಮಾಗಡಿ/ಕುಣಿಗಲ್
2. ಎಲ್ಲಾ ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರುಗಳು

# 2021-22ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಪ್ರತಿ ಹನಿಗೆ ಅಧಿಕ ಬೆಳೆ (ಹನಿ ನೀರಾವರಿ)

**Pradhan Mantri Krishi Sinchayee Yojana - Per Drop More Crop (Drip Irrigation) [PMKSY-PDMC (MI)]**

**ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 2851-00-107-1-49(106)ಯಡಿ**

# 2021–22ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಪ್ರತಿ ಹನಿಗೆ ಅಧಿಕ ಬೆಳೆ (ಹನಿ ನೀರಾವರಿ) Pradhan Mantri Krishi Sinchayee Yojana - Per Drop More Crop (Drip Irrigation) [PMKSY-PDMC (MI)] ಕಾರ್ಯಕ್ರಮದ ಮಾರ್ಗಸೂಚಿ

**I. ಯೋಜನೆಯ ಹೆಸರು: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಪ್ರತಿ ಹನಿಗೆ ಅಧಿಕ ಬೆಳೆ (ಹನಿ ನೀರಾವರಿ)** Pradhan Mantri Krishi Sinchayee Yojana - Per Drop More Crop (Drip Irrigation) [PMKSY-PDMC (MI)] **ಕಾರ್ಯಕ್ರಮ**

## I. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

ನೀರು ರೇಷ್ಮೆ ಕೃಷಿಯಲ್ಲಿ ಅತ್ಯಗತ್ಯವಾಗಿರುವ ಸಂಪನ್ಮೂಲಗಳಲ್ಲಿ ಒಂದು. ಆಧುನಿಕ ಹಿಪ್ಪುನೇರಳೆ ವ್ಯವಸಾಯದಲ್ಲಿ ನೀರಿನ ಮಿತ ಬಳಕೆ ಮತ್ತು ಸಂರಕ್ಷಣೆ ಅತ್ಯಂತ ಮಹತ್ವವನ್ನು ಪಡೆದಿದ್ದು ಈ ನಿಟ್ಟಿನಲ್ಲಿ ಹನಿನೀರಾವರಿಯ ಬಳಕೆ ಅತ್ಯವಶ್ಯಕವಾಗಿದೆ. ಹನಿನೀರಾವರಿ ಪದ್ಧತಿಯ ಬಳಕೆಯಿಂದ ನಾಡಿನ ಜಲಸಂಪನ್ಮೂಲವನ್ನು ಸಂರಕ್ಷಣೆ ಹಾಗೂ ಮಿತವ್ಯಯ ಮಾಡಬಹುದಲ್ಲದೇ ಬೆಳೆಗಳಿಂದ ಹೆಚ್ಚಿನ ಇಳುವರಿಯನ್ನು ಪಡೆಯಬಹುದು.

ಹನಿನೀರಾವರಿಯ ಮಹತ್ವವನ್ನು ಮನಗಂಡು 1997–98 ಸಾಲಿನಿಂದ ಇಲಾಖೆಯಲ್ಲಿ ವಿವಿಧ ಯೋಜನೆಗಳಡಿ ಹನಿನೀರಾವರಿ ಅಳವಡಿಕೆಗೆ ಪ್ರೋತ್ಸಾಹ ನೀಡಲಾಗಿರುತ್ತದೆ. 2014–15ನೇ ಸಾಲಿನಲ್ಲಿ ಹನಿನೀರಾವರಿ ಕಾರ್ಯಕ್ರಮವನ್ನು ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ [National Mission Sustainable Agriculture-On farm Water Management (NMSA-OFWM)]ದಡಿ ಅನುಷ್ಠಾನಗೊಳಿಸಲಾಗಿದ್ದು, 2015–16ನೇ ಸಾಲಿನಿಂದ ಈ ಕಾರ್ಯಕ್ರಮವನ್ನು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅನುಷ್ಠಾನಗೊಳಿಸಲಾಗಿದೆ.

## II. ಯೋಜನೆಯ ಮುಖ್ಯಾಂಶಗಳು:–

1. 2015-16ನೇ ಸಾಲಿನಿಂದ ಕೇಂದ್ರ ಪುರಸ್ಕೃತ ಹನಿ ನೀರಾವರಿ ಯೋಜನೆಯನ್ನು ಭಾರತ ಸರ್ಕಾರದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ (Pradhan Mantri Krishi Sinchayee Yojana–PMKSY) ಒಂದು ಭಾಗವಾಗಿ Per Drop More Crop ಅಡಿ ಅನುಷ್ಠಾನಗೊಳಿಸಲಾಗುತ್ತಿದೆ.
2. 2021–22ನೇ ಸಾಲಿನಲ್ಲಿ ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಹಿಪ್ಪುನೇರಳೆ ವ್ಯವಸಾಯದಲ್ಲಿ ಹನಿ ನೀರಾವರಿ ಅಳವಡಿಸುವ ಎಲ್ಲಾ ವರ್ಗದ ರೈತರಿಗೆ ನಿಯಮಾನುಸಾರ ಗರಿಷ್ಠ ಮಿತಿಗೆ ಒಳಪಟ್ಟು ಸಹಾಯಧನ ನೀಡಲಾಗುವುದು.
3. ಹನಿ ನೀರಾವರಿ ಅಳವಡಿಕೆಗೆ ಪ್ರತಿ ಫಲಾನುಭವಿ ಕುಟುಂಬಕ್ಕೆ ಗರಿಷ್ಠ 5.00 ಹೆಕ್ಟೇರ್ ಪ್ರದೇಶದವರೆಗೆ ಸಹಾಯಧನ ನೀಡಲಾಗುವುದು.

## III. ಯೋಜನೆಯ ಉದ್ದೇಶಗಳು:

1. ಹನಿನೀರಾವರಿ ಪದ್ಧತಿಯನ್ನು ಬಳಸಿ ಜಲಸಂಪನ್ಮೂಲವನ್ನು ಮಿತವ್ಯಯ ಮಾಡುವುದು.
2. ರೈತರಿಗೆ ಸಹಾಯಧನ ನೀಡುವುದರ ಮೂಲಕ ಹನಿನೀರಾವರಿಯ ಪದ್ಧತಿಯನ್ನು ರೈತರ ಜಮೀನುಗಳಲ್ಲಿ ಅಳವಡಿಸಲು ಪ್ರೋತ್ಸಾಹಿಸಿ ಶೇ.50–70 ರಷ್ಟು ನೀರಿನ ಮಿತವ್ಯಯ ಸಾಧಿಸುವುದಲ್ಲದೇ, ವಿದ್ಯುತ್‌ಶಕ್ತಿ ಮತ್ತು ಕೂಲಿ ವೆಚ್ಚದಲ್ಲಿ ಮಿತವ್ಯಯ ಸಾಧಿಸುವುದು.

3. ಹನಿನೀರಾವರಿಯಲ್ಲಿ ರಸಾವರಿ (Fertigation) ಪದ್ದತಿಯ ಮೂಲಕ ರಾಸಾಯನಿಕ ಗೊಬ್ಬರಗಳನ್ನು ಬೆಳೆಗಳಿಗೆ ನೀಡುವುದರ ಮೂಲಕ ಶೇ.30-40ರಷ್ಟು ರಾಸಾಯನಿಕ ಗೊಬ್ಬರಗಳ ಮಿತವ್ಯಯ ಸಾಧಿಸುವುದು.

4. ಬೆಳೆಗಳಲ್ಲಿ ಶೇ.30-100 ರಷ್ಟು ಹೆಚ್ಚು ಇಳುವರಿ ಹಾಗೂ ಉತ್ಪಾದಕತೆ ಸಾಧಿಸುವುದು.

## IV. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು:

**1. ಹನಿ ನೀರಾವರಿ:**

ರಾಜ್ಯಾದ್ಯಂತ ಎಲ್ಲಾ ವರ್ಗದ ರೈತರಿಗೆ ಹನಿ ನೀರಾವರಿ ಅಳವಡಿಕೆಗಾಗಿ ಪ್ರತೀ ಫಲಾನುಭವಿಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶದವರೆಗೆ ಸಹಾಯಧನ ನೀಡಲಾಗುವುದು.

**2. ತರಬೇತಿ:**

ಹನಿ ನೀರಾವರಿ ಕುರಿತಂತೆ ಅಧಿಕಾರಿಗಳು / ರೈತರು / ಹನಿ ನೀರಾವರಿ ಅಳವಡಿಸುವಂತಹ ಸಂಸ್ಥೆ/ಡೀಲರ್‌ಗಳಿಗೆ ತರಬೇತಿ ನೀಡಲು ವಿವಿಧ ಪ್ರಚಾರ ಮಾಧ್ಯಮಗಳ ಮುಖಾಂತರ ಪ್ರಚಾರ ಕೈಗೊಳ್ಳಲು ಭಾರತ ಮಾರ್ಗಸೂಚಿಯನ್ವಯ ಅವಕಾಶ ಕಲ್ಪಿಸಲಾಗಿರುತ್ತದೆ. ಈ ಬಗ್ಗೆ ಅನುಷ್ಠಾನಾಧಿಕಾರಿಗಳು ಕ್ರಮವಹಿಸಬೇಕಾಗಿರುತ್ತದೆ.

## V. ಅನುದಾನ ಮತ್ತು ಸಹಾಯಧನ:

2021-22ನೇ ಸಾಲಿನ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ರಾಜ್ಯದ ವಿವಿಧ ವರ್ಗದ ರೈತರಿಗೆ ಅಂದರೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ.55 ರಷ್ಟು ಹಾಗೂ ಇತರೆ ರೈತರಿಗೆ ಶೇ.45 ರಷ್ಟು ಸಹಾಯಧನದ ಮಾದರಿಯಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಈಗಾಗಲೇ ನೀಡುತ್ತಿರುವ ಅನುಪಾತದಲ್ಲಿ(60:40) ನೀಡಲಾಗುತ್ತದೆ. ಆದ್ದರಿಂದ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುಪಾತದ ವಿವರ ಈ ಕೆಳಕಂಡಂತಿದೆ.

| ವರ್ಗ | ಕೇಂದ್ರದ ಪಾಲು (%) | ರಾಜ್ಯದ ಪಾಲು (%) | ಒಟ್ಟು (%) |
|---|---|---|---|
| ಸಣ್ಣ ಮತ್ತು ಅತೀ ಸಣ್ಣ | **33** | **22** | **55** |
| ಇತರೆ | **27** | **18** | **45** |
| ಒಟ್ಟು | **60** | **40** | **100** |

ರಾಜ್ಯ ಸರ್ಕಾರದ ಆದೇಶ ಸಂಖ್ಯೆ:HORTI/157/HPP/2020(e-office) Bangalore Dated:18-08-2021 ರನ್ವಯ PMKSY-PDMC ಯಡಿ ಈ ಕೆಳಕಂಡಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

| Category | Central Share(%) | State Share(%) | | | Total Subsidy(%) |
|---|---|---|---|---|---|
| | | Compulsary Share | Additional Share | Total State Share | |
| A) Small Farmers with total holding of Land upto 2 hectares and Farmers belonging to Schedule Caste and Schedule Tribe category will be eligible for the Top-up subsidy from Government of | 33 | 22 | 35 | 57 | 90 |

| | | | | | |
|---|---|---|---|---|---|
| Karnataka taking the total subsidy amount to 90% | | | | | |
| B) All Farmers will be eligible for subsidy of 45% but the financial assistance will be limited to overall ceiling of 5 hectares per beneficiary as per Government of india guidelines | 27 | 18 | - | 18 | 45 |

ಈ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುದಾನವನ್ನು Public Financial Management System (PFMS) (Through the treasury integration route) ಮೂಲಕ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುವುದು.

## VI. ಫಲಾನುಭವಿಗಳ ಅರ್ಹತೆ:

1) ಫಲಾನುಭವಿಗಳು ರೇಷ್ಮೆ ಬೆಳೆಗಾರರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. (ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರು ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸಬಹುದು).

2) ಮಹಿಳೆಯರ ಹೆಸರಿನಲ್ಲಿ ಖಾತೆ ಹೊಂದಿದ್ದಲ್ಲಿ, ಮಹಿಳಾ ಖಾತೆದಾರರೇ ಅರ್ಜಿ ಸಲ್ಲಿಸಬೇಕು. (ಕುಟುಂಬದ ಇತರೆ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಲಾಗುವುದಿಲ್ಲ).

3) ಫಲಾನುಭವಿಗಳು ರೇಷ್ಮೆ ಬೆಳೆಗಾರರಾಗಿದ್ದು ರೇಷ್ಮೆ ಕೃಷಿಯಲ್ಲಿ ಆಸಕ್ತಿ ಹೊಂದಿರ ಬೇಕು ಹಾಗೂ ಹನಿನೀರಾವರಿ ಅಳವಡಿಸಿದ ನಂತರ ರೇಷ್ಮೆ ಕೃಷಿಯನ್ನು ಮುಂದುವರೆಸಬೇಕು.

4) ಫಲಾನುಭವಿಗಳು ನೀರಾವರಿ ಮೂಲವನ್ನು ಹೊಂದಿರಬೇಕು ಹಾಗೂ ನೀರಾವರಿಗೆ ಯೋಗ್ಯವಿರುವಂತಹ ನೀರನ್ನು ಹೊಂದಿರಬೇಕು. ಜೊತೆಗೆ ಹನಿನೀರಾವರಿ ಘಟಕಗಳು ಕಾರ್ಯನಿರ್ವಹಿಸಲು ಅವಶ್ಯವಿರುವ ವಿದುಚ್ಛಕ್ತಿ ಅಥವಾ ಇತರೆ ಶಕ್ತಿಮೂಲಗಳನ್ನು ಹೊಂದಿರಬೇಕು. (ತನ್ನ ಸ್ವಂತ ನೀರಾವರಿ ಮೂಲ ಇಲ್ಲದಿದ್ದಲ್ಲಿ ಬೇರೆ ರೈತರಿಂದ ಈ ಸಂಬಂಧ ಒಪ್ಪಿಗೆ ಪತ್ರ ಪಡೆದು ಸಲ್ಲಿಸಬೇಕು).

5) ಸಣ್ಣ ರೈತರಿಗೆ ಈ ಮೇಲೆ ತಿಳಿಸಿರುವಂತೆ ಗರಿಷ್ಟ 2.00 ಹೆಕ್ಟೇರ್‌ವರೆಗೆ ಶೇ.90ರಷ್ಟು ಸಹಾಯಧನ ನೀಡಲು ಅವಕಾಶವಿರುವುದರಿಂದ ಸಣ್ಣ ರೈತರಾಗಿದ್ದಲ್ಲಿ ಕಂದಾಯ ಇಲಾಖೆಯಿಂದ ದೃಡೀಕರಣ ಪಡೆದು ಅರ್ಜಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. ರೈತರು ಸಂಬಂಧಪಟ್ಟ ಜಿಲ್ಲೆಯಲ್ಲಿ ಅಲ್ಲದೇ ಇತರೆ ಯಾವುದೇ ಜಿಲ್ಲೆಯಲ್ಲಿ ತಮ್ಮ ಹೆಸರಿನಲ್ಲಿ ಜಮೀನು ಇದ್ದರೆ ಅವುಗಳು ಸೇರಿದಂತೆ ಸಣ್ಣ ರೈತರ ಹಿಡುವಳಿದಾರರ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಈ ಬಗ್ಗೆ ರೇಷ್ಮೆ ಉಪನಿರ್ದೇಶಕರು(ಜಿಪಂ), ತಾಲ್ಲೂಕು ಮಟ್ಟದ ರೇಷ್ಮೆ ಸಹಾಯಕ ನಿರ್ದೇಶಕರು ಹಾಗೂ ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು ಖಾತರಿಪಡಿಸಿಕೊಳ್ಳಬೇಕು.

6) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಈ ಮೇಲೆ ತಿಳಿಸಿರುವಂತೆ ಗರಿಷ್ಟ 2.00 ಹೆಕ್ಟೇರ್‌ವರೆಗೆ ಶೇ.90ರಷ್ಟು ಸಹಾಯಧನ ನೀಡಲು ಅವಕಾಶವಿರುವುದರಿಂದ ಸದರಿ ಪಂಗಡಗಳಿಗೆ ಸೇರಿರುವ ಬಗ್ಗೆ RD ಸಂಖ್ಯೆ ಇರುವಂತಹ ಜಾತಿ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು.

7) ಸಣ್ಣ ರೈತರನ್ನು ಹೊರತುಪಡಿಸಿ ಎಲ್ಲಾ ರೈತರಿಗೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ 5.00 ಹೆಕ್ಟೇರ್‌ವರೆಗೂ ಶೇ.45ರಷ್ಟು ಸಹಾಯಧನವನ್ನು ಪಾವತಿಸುವ ಬಗ್ಗೆ ಮೇಲೆ ತಿಳಿಸಿರುವ

ಕೋಷ್ಟಕದಂತೆ ಕ್ರಮವಹಿಸುವುದು. ಇತರೆ ರೈತರಾಗಿರುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಖಾತರಿಪಡಿಸಿಕೊಳ್ಳುವುದು.

**VII. ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಗುರುತಿಸುವಿಕೆ ಹಾಗೂ ಸಹಾಯಧನ ವಿತರಣೆ ವಿಧಾನಗಳು:–**

a) ರೇಷ್ಮೆ ಬೆಳೆಗಾರರು ಹನಿ ನೀರಾವರಿ ಅಳವಡಿಕೆ ಸಹಾಯಧನಕ್ಕಾಗಿ Farmers Registration and Unified Beneficiary Information System (FRUITS) ತಂತ್ರಾಂಶದಲ್ಲಿ ಕಡ್ಡಾಯವಾಗಿ ನೋಂದಣಿ ಹೊಂದಬೇಕಾಗುತ್ತದೆ. ಇದರ FID ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸುವುದು.

b) ಅರ್ಜಿದಾರರು ನಿಗದಿತ ನಮೂನೆಯಲ್ಲಿ ನೊಂದಣಿ ಅರ್ಜಿಯನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಚೇರಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. **(ನೊಂದಣಿ ಅರ್ಜಿ ನಮೂನೆ–01.ಅ ಮತ್ತು 01.ಆ ಅನುಬಂಧ–05)ರಲ್ಲಿ ನೀಡಲಾಗಿದೆ,** ಅರ್ಜಿ ನಮೂನೆಗಳನ್ನು ಅಗತ್ಯ ಸಂಖ್ಯೆಯಲ್ಲಿ ಅರ್ಜಿ ಸಂಖ್ಯೆಯೊಂದಿಗೆ ಮುದ್ರಿಸಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗಳಲ್ಲಿ ಲಭ್ಯವಿರುವಂತೆ ಕ್ರಮವಹಿಸುವುದು.

c) ಫಲಾನುಭವಿಗಳ ಆಯ್ಕೆಯಲ್ಲಿ ಪಂಚಾಯತ್ ರಾಜ್ ಇಲಾಖೆಗಳಿಗೂ ಸಹ ಪಾಲ್ಗೊಳ್ಳುವಂತೆ ಕ್ರಮವಹಿಸುವುದು.

**d) ಅರ್ಜಿದಾರರು ಈ ಕೆಳಕಂಡ ವಿವರ ಹಾಗೂ ದಾಖಲಾತಿಗಳನ್ನು ಅರ್ಜಿಯೊಂದಿಗೆ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು.**

1. ನಿಗಧಿತ ನಮೂನೆಯಲ್ಲಿ ನೊಂದಣಿ ಅರ್ಜಿ.
2. ವೈಯಕ್ತಿಕ ವಿವರ ಹಾಗೂ ಮೊಬೈಲ್ ದೂರವಾಣಿ ಸಂಖ್ಯೆ.
3. ಪಹಣಿ.
4. ಪಹಣಿಯಲ್ಲಿ ಬೆಳೆಯನ್ನು ನಮೂದಿಸದೇ ಇದ್ದಲ್ಲಿ, ಕಂದಾಯ ಇಲಾಖೆಯಿಂದ ಡಿಜಿಟಲ್(ಗಣಕೀಕೃತ) ಬೆಳೆ ದೃಢೀಕರಣ ಪತ್ರ ಪಡೆಯುವುದು (ಕಂದಾಯ ಇಲಾಖೆಯಿಂದ ನೀಡಲಾದ ಬೆಳೆ ದೃಢೀಕರಣ ಪತ್ರವನ್ನು ತಾಸೇಕೇ, ರೇವಿಅಗಳು Crop survey ವರದಿಯಿಂದ ಖಾತರಿಪಡಿಸಿಕೊಳ್ಳಬೇಕು).
5. ಚೆಕ್ಕು ಬಂದಿ: ಕಂದಾಯ ಇಲಾಖೆಯಿಂದ ಪಡೆಯುವುದು. Dishant application ಮೂಲಕ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಖಾತರಿಪಡಿಸಿಕೊಳ್ಳುವುದು.
6. ನೀರಿನ ಮೂಲದ ವಿವರ (ಸ್ವತ: ನೀರಿನ ಮೂಲ ಹೊಂದದೇ ಇದ್ದಲ್ಲಿ ಇತರರಿಂದ ನೀರು ಪಡೆಯುವ ಬಗ್ಗೆ ಒಪ್ಪಿಗೆ ಪತ್ರ ಸಲ್ಲಿಸುವುದು)
7. ನೀರು / ವಿದ್ಯುಚ್ಛಕ್ತಿ ಅಥವಾ ಇತರೆ ಶಕ್ತಿಮೂಲಗಳ ಲಭ್ಯತೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಖಾತರಿಪಡಿಸಿ ಕೊಳ್ಳಬೇಕಾಗಿರುತ್ತದೆ.
8. ಮಣ್ಣು ಮತ್ತು ನೀರಿನ ವಿಶ್ಲೇಷಣೆ ಪ್ರಮಾಣ ಪತ್ರ ಸಲ್ಲಿಸುವುದು(ಸರ್ಕಾರ ಸ್ವಾಮ್ಯ/ಅಂಗೀಕೃತ ಸಂಸ್ಥೆಗಳಿಂದ)
9. ಆಧಾರ್ ಕಾರ್ಡ್ ಪ್ರತಿ ಒದಗಿಸುವುದು.
10. ಇಲಾಖಾ ನೊಂದಾಯಿತ ಕಂಪನಿಯ ಇಂಜಿನಿಯರ್‌ರವರಿಂದ ದೃಡೀಕರಿಸಲ್ಪಟ್ಟ ವಿನ್ಯಾಸ ನೀಡುವುದು.
11. ದರಪಟ್ಟಿಯನ್ನು ಹನಿ ನೀರಾವರಿ ಘಟಕ ಅಳವಡಿಸಿದ ಇಲಾಖಾ ಅನುಮೋದಿತ ಕಂಪನಿರವರಿಂದ ಮಾತ್ರ ಪಡೆಯುವುದು.

12. Pre Sanction Order ನಲ್ಲಿ ನಮೂದಿಸಿರುವಂತೆ ರೈತರ ವಂತಿಕೆಯನ್ನು ಸಂಬಂಧಿತ ಹನಿ ನೀರಾವರಿ ಕಂಪನಿರವರ ಬ್ಯಾಂಕ್ ಖಾತೆಗೆ ಜಮೆ ಮಾಡಿರುವ ಬಗ್ಗೆ Online Payment Details (UTR no. & Bank Passbook ಪ್ರತಿ) ಅನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ರವರ ಕಛೇರಿಗೆ ಸಲ್ಲಿಸುವುದು. Reserve Bank of India (RBI) ರವರ ಮಾರ್ಗಸೂಚಿಯನ್ವಯ Digital payment ಅಡಿಯಲ್ಲಿ ರೈತರ ವಂತಿಕೆಯನ್ನು ಪಾವತಿಸಲು ಕ್ರಮವಹಿಸುವುದು (ಷರಾ: ರೈತರ ವಂತಿಕೆಯನ್ನು NEFT ಮುಖಾಂತರ ಪಾವತಿ ಮಾಡಲು ಆದ್ಯತೆ ನೀಡಬೇಕಾಗಿರುತ್ತದೆ.)

13. ಫಲಾನುಭವಿಯು ಭಾರತ ಸರ್ಕಾರದ Indicative cost ( ಸೂಚಕ ಮೊತ್ತ) ಗೆ ತಗುಲುವ ವೆಚ್ಚಕ್ಕೆ ನೀಡಬೇಕಾದ ಶೇಕಡಾವಾರು (ಕಂಪನಿಗಳಿಗೆ ಸಹಾಯಧನ ಪಾವತಿ ಮಾಡುವ ಸಂದರ್ಭದಲ್ಲಿ) ರೈತರ ವಂತಿಕೆಯನ್ನು ಅಥವಾ ಪೂರ್ಣ ವೆಚ್ಚದ (ರೈತರಿಗೆ ಸಹಾಯಧನ ಪಾವತಿ ಮಾಡುವ ಸಂದರ್ಭದಲ್ಲಿ) ಕಂಪನಿಯವರಿಗೆ ಪಾವತಿಸಬೇಕಾಗಿರುತ್ತದೆ. ಮುಂದುವರೆದು, ತಾಕಿನಲ್ಲಿ ನೈಜವಾಗಿ ಅಳವಡಿಸುವ ಉಪಕರಣಗಳ ಒಟ್ಟಾರೆ ಮೊತ್ತವು Indicative cost ( ಸೂಚಕ ಮೊತ್ತ) ಕ್ಕಿಂತ ಹೆಚ್ಚಾದಲ್ಲಿ, ತಗುಲುವ ಹೆಚ್ಚುವರಿ ಮೊತ್ತವನ್ನು ಸಹ ರೈತರು ಕಂಪನಿಗಳಿಗೆ ಪಾವತಿಸಬೇಕಾಗಿರುತ್ತದೆ. **ಅನುಬಂಧ-2** ರಲ್ಲಿ ನೀಡಲಾಗಿದೆ.

14. **Pre Sanction Order ನಲ್ಲಿ ನಮೂದಿಸುವ ಮೊತ್ತವು ಅಂದಾಜು ಸಹಾಯಧನ (estimated subsidy)ವಾಗಿ ಪರಿಗಣಿಸಬೇಕಾಗಿರುತ್ತದೆ. ಪರಿಶೀಲನಾ ಅಧಿಕಾರಿಗಳ ತಾಕು ಪರಿಶೀಲನೆ ನಂತರ ಶಿಫಾರಸ್ಸು ಮಾಡುವ ಸಹಾಯಧನಕ್ಕೆ ಫಲಾನುಭವಿ ಹಾಗೂ ಕಂಪನಿ/ಸಂಸ್ಥೆಯವರು ಬದ್ದರಾಗಿರತಕ್ಕದು.**

15. ಫಲಾನುಭವಿಯ ಬ್ಯಾಂಕ್ ಖಾತೆ ಸಂಖ್ಯೆ, IFSC code, ಇತ್ಯಾದಿಗಳನ್ನು ಸಲ್ಲಿಸುವುದು. ಸದರಿ ಖಾತೆಯೊಂದಿಗೆ ಆಧಾರ್ ಸಂಖ್ಯೆ ಲಿಂಕ್ ಅಗಿರಬೇಕು.

16. ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿ, ತಾವು ಆಗಲೀ ಅಥವಾ ತಮ್ಮ ಕುಟುಂಬ ಸದಸ್ಯರಾಗಲೀ ಈ ಹಿಂದೆ ಸರ್ಕಾರದಿಂದ ಸೌಲಭ್ಯಗಳನ್ನು ಪಡೆದಿರುವ/ ಪಡೆಯದೇ ಇರುವ ಬಗ್ಗೆ ಘೋಷಣೆ ಪತ್ರ ಸಲ್ಲಿಸುವುದು.

17. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳು ಮೇಲಿನ ಎಲ್ಲಾ ದಾಖಲಾತಿಗಳೊಂದಿಗೆ RD ಸಂಖ್ಯೆ ಹೊಂದಿರುವ ಜಾತಿ ಪ್ರಮಾಣ ಪತ್ರವನ್ನು ಸಹ ಕಡ್ಡಾಯವಾಗಿ ನೀಡಬೇಕಾಗಿರುತ್ತದೆ.

**e)** ಇಲಾಖಾ ನೊಂದಾಯಿತ ಕಂಪನಿ/ಸಂಸ್ಥೆಯ ಇಂಜಿನಿಯರ್‌ರವರಿಂದ ಧೃಡೀಕರಿಸಲ್ಪಟ್ಟ ವಿನ್ಯಾಸವನ್ನು ಹಾಗೂ ದರಪಟ್ಟಿಯನ್ನು ಪರಿಶೀಲಿಸುವುದು.

**f) ಸಲ್ಲಿಸಲಾದ ಅರ್ಜಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಪರಿಶೀಲಿಸುವುದು.**

1. ಅರ್ಹ ಅರ್ಜಿದಾರರು ಈ ಹಿಂದೆ ನೀರಾವರಿ ಅಳವಡಿಕೆಗಾಗಿ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ ಪರಿಶೀಲಿಸಿ ಖಾತರಿ ಪಡಿಸಿಕೊಳ್ಳುವುದು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ. (ಪ್ರತಿ ಫಲಾನುಭವಿಗೆ ಈ ಸೌಲಭ್ಯ 5.00 ಹೆಕ್ಟೇರ್ ಮೀರಿರಬಾರದು). ಈ ಬಗ್ಗೆ ಅರ್ಜಿಯಲ್ಲಿ ಉಲ್ಲೇಖಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ನೀಡಬೇಕು.

2. ಅರ್ಜಿದಾರರು ಹನಿ ನೀರಾವರಿ ಅಳವಡಿಸಲು ಪ್ರಸ್ತಾಪಿಸಿರುವ ಕಂಪನಿ/ಸಂಸ್ಥೆರವರು ಇಲಾಖೆಯಿಂದ ಅನುಮೋದಿತವಾಗಿರುವ ಕಾರ್ಯಾದೇಶಕ್ಕೆ ಶಿಫಾರಸ್ಸು ಮಾಡುವ ಮೊದಲೇ ರೇಷ್ಮೆ ಉಪನಿರ್ದೇಶಕರು(ಜಿಪಂ) ರವರು ಹಾಗೂ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು ಪರಿಶೀಲಿಸುವುದಲ್ಲದೇ, ಸಂಬಂಧಿಸಿದ ಎಲ್ಲಾ ತಾಂತ್ರಿಕ ಸೇವಾ ಕೇಂದ್ರದ, ರೇಷ್ಮೆ ವಿಸ್ತರಣಾಧಿಕಾರಿಗಳು ಈ ಬಗ್ಗೆ ಖಚಿತಪಡಿಸಿಕೊಳ್ಳುವುದು.

3. ರೈತರು ಸಲ್ಲಿಸಿದ ಅರ್ಜಿಯನ್ನು ಕಂಪನಿಗಳಿಗೆ Bill of Quantities (BoQ) ಬಗ್ಗೆ ಮಾಹಿತಿ ನಮೂದಿಸಲು ಅರ್ಜಿದಾರರು ಈ ಹಿಂದೆ ಸಹಾಯಧನ ಪಡೆದಿರುವ (repeatation) ಬಗ್ಗೆ ಪರಿಶೀಲಿಸುವುದು ತಾಂತ್ರಿಕ ಸೇವಾ ಕೇಂದ್ರದ ಕರ್ತವ್ಯವಾಗಿರುತ್ತದೆ. ಪಡೆದಿದ್ದಲ್ಲಿ/ಪಡೆಯದೇ ಇದ್ದಲ್ಲಿ ಅದರ ವಿವರ (ಸಹಾಯಧನ ಪಡೆದ ವರ್ಷ, ಬೆಳೆ, ಮೊತ್ತ, ಕಂಪನಿ, ಪ್ರದೇಶ, ಸರ್ವೇ ನಂ) ಕಡತದಲ್ಲಿ ದಾಖಲಿಸಿ, ಸದರಿ ಅಧಿಕಾರಿಯು ರೇಷ್ಮೆ ಸಹಾಯಕ ನಿರ್ದೇಶಕರು/ ರೇಷ್ಮೆ ಉಪನಿರ್ದೇಶಕರು (ಜಿಪಂ) ಗಮನಕ್ಕೆ ತರುವುದು. ಸದರಿ ಫಲಾನುಭವಿ ಈಗಾಗಲೇ 5.00 ಹೆಕ್ಟೇರ್ ಪಡೆದಿದಲ್ಲಿ ಅರ್ಜಿಯನ್ನು ತಿರಸ್ಕರಿಸುವ ಬಗ್ಗೆ ರೇಷ್ಮೆ ಉಪನಿರ್ದೇಶಕರು(ಜಿಪಂ)ರವರು ಸೂಕ್ತ ತೀರ್ಮಾನ ಕೈಗೊಳ್ಳುವುದು.
4. ಹನಿ ನೀರಾವರಿ ಪದ್ಧತಿಯ ಅಳವಡಿಕೆಯ ಮುನ್ನ ಸಂಬಂಧಿಸಿದ ಕಂಪನಿ/ಸಂಸ್ಥೆಯವರು ಆ ಅರ್ಜಿದಾರರ ತಾಕನ್ನು ವೀಕ್ಷಿಸಿ, ಹನಿ ನೀರಾವರಿ ಘಟಕ ಅಳವಡಿಸಿರುವ ಬಗ್ಗೆ Pre-inspection GPS Photo ತೆಗೆಯುವುದು ಹಾಗೂ **(ಈ ವರದಿಯನ್ನು ನೀಡುವ ನಮೂನೆ-03ರ ಅನುಬಂಧ-07 ರಲ್ಲಿ ನೀಡಲಾಗಿದೆ)** ಈ ಕೆಳಕಂಡ ಅಂಶಗಳನ್ನು ಪರಿಶೀಲಿಸುವುದು.
   i. ಸಣ್ಣ ರೈತರು, ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡದ ರೈತರು ಹಾಗೂ ಇತರೆ ರೈತರ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
   ii. ನೀರಿನ ಮೂಲ ಹಾಗೂ ವಿದ್ಯುತ್ ಅಥವಾ ಇತರೆ ಶಕ್ತಿಮೂಲಗಳ ಲಭ್ಯತೆ.
   iii. ಅರ್ಜಿದಾರರು/ಕುಟುಂಬದ ಸದಸ್ಯರೊಂದಿಗೆ ಜಮೀನಿನ ಜಿಪಿಎಸ್ ಫೋಟೋ ತೆಗೆದು ಸಲ್ಲಿಸುವುದು.
   iv. ತಾಕುವಿನ ವಿಸ್ತೀರ್ಣ, ಆಕಾರ, ಬೆಳೆ, ಮಣ್ಣು ಮತ್ತು ನೀರಿನ ಗುಣಮಟ್ಟ, ನೀರಿನ ಹಾಗೂ ವಿದ್ಯುತ್ ಅಥವಾ ಇತರೆ ಶಕ್ತಿಮೂಲಗಳ ಲಭ್ಯತೆಯನ್ನು ಆಧರಿಸಿ ಸಿದ್ದಪಡಿಸಿದ ವಿನ್ಯಾಸವನ್ನು ತಯಾರಿಸಿ ಅದರ ಒಂದು ಪ್ರತಿಯನ್ನು ಕಡ್ಡಾಯವಾಗಿ ಕಡತದಲ್ಲಿರಿಸಬೇಕು.

g. ಅರ್ಜಿದಾರರರು, ಸಲ್ಲಿಸಿರುವ ಎಲ್ಲಾ ವಿವರ ಹಾಗೂ ದಾಖಲಾತಿಗಳು ಸರಿ ಇರುವ ಬಗ್ಗೆ ಪರಿಶೀಲಿಸುವುದು.

## VIII. ಕಾರ್ಯಾದೇಶಕ್ಕಾಗಿ ಶಿಫಾರಸ್ಸು (ಅಧಿಕಾರಿಗಳಿಂದ):

i. ರೈತರು ಈ ಹಿಂದೆ ಸಹಾಯಧನ ಪಡೆದಿರುವ (repeatation) ಬಗ್ಗೆ ಪರಿಶೀಲಿಸುವುದು ಹಾಗೂ ಜೇಷ್ಠತೆ ನಿರ್ವಹಣೆ ಮಾಡುವುದು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ. ವ್ಯತ್ಯಾಸವಿದ್ದಲ್ಲಿ, ಅದನ್ನು ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು/ರೇಷ್ಮೆ ಉಪನಿರ್ದೇಶಕರು(ಜಿಪಂ)ರವರ ಗಮನಕ್ಕೆ ತಂದು ಅರ್ಜಿಯನ್ನು ತಿರಸ್ಕರಿಸಿ ಸೂಕ್ತ ಕಾರಣಗಳೊಂದಿಗೆ ಹಿಂದಿರುಗಿಸುವುದು. ಈ ಬಗ್ಗೆ ರೇಷ್ಮೆ ಉಪನಿರ್ದೇಶಕರು(ಜಿಪಂ) ಖಚಿತಪಡಿಸಿಕೊಂಡು ಅಧೀನ ಅಧಿಕಾರಿಗಳಿಗೆ ತಿಳಿಸತಕ್ಕದ್ದು.

ii. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಅರ್ಜಿಗಳನ್ನು ಸ್ವೀಕರಿಸಿದ ನಂತರ, ಅವುಗಳನ್ನು ವಹಿಯಲ್ಲಿ ನಮೂದಿಸಿಕೊಂಡು (ವಹಿಯ ನಮೂನೆ-02ನ್ನು ಅನುಬಂಧ-06ರಲ್ಲಿ ನೀಡಲಾಗಿದೆ), ಪ್ರತಿ ಅರ್ಜಿದಾರರಿಗೆ ಅನನ್ಯ ಸಂಖ್ಯೆ (Unique code) ಯನ್ನು ನೀಡುವುದು (ಅನನ್ಯ ಸಂಖ್ಯೆಯನ್ನು ನೀಡುವ ವಿಧಾನವನ್ನು ಅನುಬಂಧ-04ರಲ್ಲಿ ನೀಡಲಾಗಿದೆ ಹಾಗೂ ಪ್ರತಿ ಅರ್ಜಿದಾರರಿಗೆ ಪ್ರತ್ಯೇಕ ಕಡತವನ್ನು ತೆರೆಯುವುದು.

iii. ಕಂಪನಿ / ಸಂಸ್ಥೆಯವರು ಸಲ್ಲಿಸಲಾದ ಅರ್ಜಿ, ಸಲ್ಲಿಸಲಾದ ಇತರೆ ದಾಖಲಾತಿಗಳನ್ನು ಹಾಗೂ ದರಪಟ್ಟಿಯನ್ನು ಪರಿಶೀಲಿಸಿ, Pre Sanction Order ಅನ್ನು ನೀಡುವುದು. ಅದರಲ್ಲಿ ರೈತರ ವಂತಿಕೆ ಹಾಗೂ ಅಂದಾಜು ಸಹಾಯಧನದ ಬಗ್ಗೆ ಮಾಹಿತಿಯನ್ನು ನಮೂದಿಸಬೇಕಾಗಿರುತ್ತದೆ. (ನಮೂನೆ-13ನ್ನು ಅನುಬಂಧ-19ರಲ್ಲಿ ನೀಡಲಾಗಿದೆ).

iv. Pre Sanction Order ನಲ್ಲಿ ನಮೂದಿಸಿರುವ ರೈತರ ವಂತಿಕೆಯು ಕಂಪನಿ/ಸಂಸ್ಥೆಗೆ . Reserve Bank of India (RBI) ರವರ ಮಾರ್ಗಸೂಚಿಯನ್ವಯ Digital payment ಮುಖಾಂತರ ಪಾವತಿಸಿರುವ ಬಗ್ಗೆ UTR ಖಾತರಿಪಡಿಸಿಕೊಂಡು ಕಾರ್ಯಾದೇಶಕ್ಕಾಗಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಮುಖಾಂತರ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಶಿಫಾರಸ್ಸು ಮಾಡುವುದು.

v. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಘಟಕ ಅಳವಡಿಕೆ ಮುನ್ನ ತಾಕನ್ನು ಪರಿಶೀಲಿಸಿ, ಪರಿಶೀಲನಾ ಅಧಿಕಾರಿಯ ಛಾಯಾಚಿತ್ರದೊಂದಿಗೆ Pre-inspection GPS Photoವನ್ನು ತೆಗೆಯುವುದು.

vi. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಶಿಫಾರಸ್ಸು ಮಾಡಲಾದ ಅರ್ಜಿ, ದಾಖಲಾತಿ, ರೈತರ ವಂತಿಕೆ ಪಾವತಿ ಬಗ್ಗೆ ಖಾತರಿಪಡಿಸಿಕೊಂಡು, ಅರ್ಹ ಫಲಾನುಭವಿಗೆ ಸಹಾಯಧನ ನೀಡುವ ಬಗ್ಗೆ ದೃಢೀಕರಿಸಿ, ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರ ಮುಖಾಂತರ ಶಿಫಾರಸ್ಸು ಮಾಡಿ, ಸಂಬಂಧಪಟ್ಟ ಕಡತವನ್ನು ರೇಷ್ಮೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು. ಅರ್ಜಿದಾರರು ಅರ್ಹರಿಲ್ಲದೇ ಇದ್ದ ಪಕ್ಷದಲ್ಲಿ ಅರ್ಜಿಯನ್ನು ತಿರಸ್ಕರಿಸಿ ಕಾರಣಗಳನ್ನು ನಮೂದಿಸಿ, ಅರ್ಜಿಯನ್ನು ಅರ್ಜಿದಾರರಿಗೆ ಹಿಂದಿರುಗಿಸುವುದು.

vii. ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರ ಕಛೇರಿಯಲ್ಲಿ ತಾಂತ್ರಿಕ ಸಹಾಯಕರು ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಕಾರ್ಯಾದೇಶವನ್ನು ನೀಡಲು ಕಡತವನ್ನು ರೇಷ್ಮೆ ಉಪ ನಿರ್ದೇಶಕರು (ಜಿಪಂ) ರವರಿಗೆ ಶಿಫಾರಸ್ಸು ಮಾಡುವುದು. ಕಾರ್ಯಾದೇಶ ಶಿಫಾರಸ್ಸು ಮಾಡುವ ಮುನ್ನ, ತಾಂತ್ರಿಕ ಸಹಾಯಕರು ಅರ್ಜಿದಾರರು ಹನಿ ನೀರಾವರಿ ಅಳವಡಿಕೆಗೆ ಸಹಾಯಧನವನ್ನು ಇತರೆ ತಾಲ್ಲೂಕುಗಳಲ್ಲಿ ಪಡೆದಿದ್ದಾರೆಯೇ/ಇಲ್ಲವೇ ಎನ್ನುವುದರ ಬಗ್ಗೆ ಹಾಗೂ ಇವರ ಮಿತಿ 5.00 ಹೆಕ್ಟೇರ್ ಮೀರಿದೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಪರಿಶೀಲಿಸಿ ಕಡತದಲ್ಲಿ ನಮೂದಿಸುವುದು. (ನಮೂನೆ–15, ಅನುಬಂಧ–22ನ್ನು ಕಡತದಲ್ಲಿರಿಸುವುದು)

viii. ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರು ಸದರಿ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಂಡು ಕಾರ್ಯಾದೇಶವನ್ನು ನೀಡುವುದು. ಸದರಿ ಕಾರ್ಯಾದೇಶದಲ್ಲಿ ಅಂದಾಜು ಸಹಾಯಧನ ಹಾಗೂ ರೈತರ ವಂತಿಕೆಯನ್ನು ಕಡ್ಡಾಯವಾಗಿ ನಮೂದಿಸುವುದು. ಅದರ ಪ್ರತಿಯನ್ನು ತಮ್ಮ ಸಹಿಯೊಂದಿಗೆ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು, ಕಂಪನಿ/ಸಂಸ್ಥೆಯವರಿಗೆ (ರೇಷ್ಮೆ ಸಹಾಯಕ ನಿರ್ದೇಶಕರ ಮೂಲಕ) ಹಾಗೂ ಅರ್ಜಿದಾರರಿಗೆ ನೀಡಬೇಕು ಹಾಗೂ ಟಿಪ್ಪಣಿಯನ್ನು ಅನುಮೋದಿಸಿ ಕಡತವನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಹಿಂದಿರುಗಿಸಬೇಕು.

ix. ಆಯಾ ಜಿಲ್ಲೆಗೆ ನಿಗದಿಯಾದ ಘಟಕವಾರು ಗುರಿ ಅನುಸಾರ ಕಾರ್ಯಾದೇಶ ನೀಡುವುದು. ಕಾರ್ಯಾದೇಶ ಕುರಿತಾಗಿ ಕಾಲಕಾಲಕ್ಕೆ ರೇಷ್ಮೆ ನಿರ್ದೇಶನಾಲಯದಿಂದ ಹೊರಡಿಸಲಾಗುವ ಆದೇಶ/ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

## IX. ಘಟಕ ಅಳವಡಿಕೆ:

1. ಕಾರ್ಯಾದೇಶ ಪಡೆದ ನಂತರ ಕಂಪನಿ/ಸಂಸ್ಥೆಯವರು ನಿಗದಿತ ಅವಧಿಯೊಳಗೆ ಹನಿ ನೀರಾವರಿ ಘಟಕಗಳನ್ನು ಅಳವಡಿಸಿ, Tax Invoice Bill ನೊಂದಿಗೆ Post inspection GPS Photo, e-

way Bill, ಅರ್ಜಿಯ ಸ್ವೀಕೃತಿ ಪ್ರತಿ ಹಾಗೂ ಕಾರ್ಯ ಪೂರ್ಣಗೊಂಡ ಬಗ್ಗೆ ಎಲ್ಲಾ ದಾಖಲಾತಿಗಳನ್ನು ಫಲಾನುಭವಿಯ ಮೂಲಕ 25 ದಿನಗಳ ಒಳಗಾಗಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು. ಕಡತವು ಪೂರ್ಣ ದಾಖಲಾತಿಗಳೊಂದಿಗೆ ಸಲ್ಲಿಕೆಯಾಗಿರುವ ಬಗ್ಗೆ ಕಡ್ಡಾಯವಾಗಿ ಸ್ವೀಕೃತಿ ಪ್ರತಿಯನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ನೀಡುವುದು. (ನಮೂನೆ-12ನ್ನು ಅನುಬಂಧ-17ರಲ್ಲಿ ನೀಡಲಾಗಿದೆ). ( ಒಂದು ವೇಳೆ ಒಂದಕ್ಕಿಂತ ಹೆಚ್ಚು ಕಂತುಗಳಿಲ್ಲಿ ಸರಬರಾಜು ಮಾಡಿದ್ದಲ್ಲಿ ಪ್ರತಿ ಸರಬರಾಜಿಗೆ ಪ್ರತ್ಯೇಕ e-way bill ಇರತಕ್ಕದ್ದು ಹಾಗೂ e-way bill ಗಳ ಮೊತ್ತ ಹಾಗೂ Delivery challan ಮೊತ್ತಕ್ಕೆ ತಾಳೆಯಾಗತಕ್ಕದ್ದು)

2. ನಿಗದಿತ ಅವಧಿಯೊಳಗೆ ಕಂಪನಿ/ಸಂಸ್ಥೆಯವರು ಘಟಕ ಅಳವಡಿಕೆ ಮಾಡಿರುವ ಬಗ್ಗೆ ಅಧಿಕಾರಿಗಳು ಪರಿಶೀಲಿಸುವುದು ಆದ್ಯ ಕರ್ತವ್ಯವಾಗಿರುತ್ತದೆ.

**X. <u>ಕಂಪನಿ/ಸಂಸ್ಥೆರವರು ಕಾರ್ಯವನ್ನು ಪೂರ್ಣಗೊಳಿಸಿದ ನಂತರ, ಈ ಕೆಳಕಂಡ ದಾಖಲಾತಿಗಳನ್ನು ಅರ್ಜಿದಾರರಿಗೆ ತ್ರಿಪ್ರತಿಯಲ್ಲಿ ನೀಡಬೇಕು.</u>**

1. ಮುದ್ರಿತ ಕ್ರಮ ಸಂಖ್ಯೆ ನಮೂದಿಸಲ್ಪಟ್ಟ ಸಹಾಯಧನದ ಅರ್ಜಿ. (ಅರ್ಜಿ ನಮೂನೆ-04ನ್ನು ಅನುಬಂಧ-08ರಲ್ಲಿ ನೀಡಲಾಗಿದೆ)
2. ಶಾಸನಬದ್ಧವಾದ Tax Invoice ಅನ್ನು ಕಂಪನಿ/ಸಂಸ್ಥೆರವರ ಸಹಿಯೊಂದಿಗೆ ಸಲ್ಲಿಸುವುದು.
3. ಇಲಾಖಾ ನೊಂದಾಯಿತ ಕಂಪನಿ/ ಸಂಸ್ಥೆರವರ ಇಂಜಿನಿಯರವರಿಂದ ದೃಢೀಕರಿಸಿದ ಹನಿ ನೀರಾವರಿ ಪದ್ದತಿಯ ವಿನ್ಯಾಸ ಹಾಗೂ ಉಪಯೋಗಿಸಿದ ಪರಿಕರಗಳ ವಿವರ.
4. ನಗದು ಬಿಲ್ಲು (Tax invoice)
5. ಹಣ ಸಂದಾಯವಾದ ರಸೀದಿ & ಡೆಲಿವರಿ ಚಲನ್.
6. ಕಂಪನಿಯವರು ಕಾರ್ಯ ಪೂರ್ಣಗೊಂಡ ನಂತರದ(GPS Post-inspection photo) ಬೆಳೆ ಹಾಗೂ ಹನಿ ನೀರಾವರಿ ಘಟಕ ಕಾಣುವ ರೀತಿಯಲ್ಲಿ ತೆಗೆದ ಫೋಟೋ. ಫೋಟೋ ಪ್ರತಿಗಳಲ್ಲಿ Latitude ಮತ್ತು Longitude ನಮೂದಿಸಿರಬೇಕು.
7. ಕಂಪನಿ/ಸಂಸ್ಥೆರವರು ದೃಡೀಕರಣ ಮಾಡಿದ ಕಾರ್ಯ ಪೂರ್ಣಗೊಳಿಸಿದ ದೃಢೀಕರಣ ಪತ್ರ (Work completion report)ಕಡತದಲ್ಲಿ ಇರಿಸುವುದು. (ನಮೂನೆ-05 ನ್ನು ಅನುಬಂಧ-09 ರಲ್ಲಿ ನೀಡಲಾಗಿದೆ).
8. ಅರ್ಜಿದಾರರಿಗೆ ತರಬೇತಿ ನೀಡಿರುವ ಬಗ್ಗೆ ಪ್ರಮಾಣ ಪತ್ರ (ನಮೂನೆ-06ನ್ನು ಅನುಬಂಧ-10ರಲ್ಲಿ ನೀಡಲಾಗಿದೆ).
9. ಹನಿ ನೀರಾವರಿ ಘಟಕ ಅಳವಡಿಸಿದ ನಂತರ ನೊಂದಣಿ ಪ್ರಪತ್ರದನ್ವಯ ಕಂಪನಿ/ಸಂಸ್ಥೆಯವರು ಐದು (5) ವರ್ಷಗಳ ಕಾಲ ಘಟಕವನ್ನು ನಿರ್ವಹಣೆ ಮಾಡುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು. ರೈತರ ಬೇಡಿಕೆ ಅನುಸಾರ ಕಂಪನಿ/ಸಂಸ್ಥೆಯವರು ಕಡ್ಡಾಯವಾಗಿ ಘಟಕ ನಿರ್ವಹಣೆ ಮಾಡಬೇಕಾಗಿರುತ್ತದೆ. ನಿರ್ವಹಣೆ ಮಾಡಿರುವ ಬಗ್ಗೆ ರೈತರ ಧೃಢೀಕರಣದೊಂದಿಗೆ ಮಾಹಿತಿಯನ್ನು ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಅದನ್ನು ಸಂಬಂಧಪಟ್ಟ ಕಡತದಲ್ಲಿ ನಿರ್ವಹಿಸಬೇಕಾಗಿರುತ್ತದೆ.

10. ಹನಿ ನೀರಾವರಿ ಘಟಕ ನಿರ್ವಹಣೆ ಕುರಿತಂತೆ ಅನುಮೋದಿತ ಸಂಸ್ಥೆ/ಕಂಪನಿಯು ಪ್ರತಿ ಜಿಲ್ಲೆಯಲ್ಲಿ ತಮ್ಮ Service Centres ಗಳನ್ನು ಹೊಂದಿರಬೇಕಾಗಿರುತ್ತದೆ. ಹನಿ ನೀರಾವರಿ ಸಂಸ್ಥೆಯವರು ಘಟಕ ಅನುಷ್ಠಾನದ ನಂತರ ಘಟಕದಲ್ಲಿ ತಾಂತ್ರಿಕ ತೊಂದರೆ, Spare parts availability, ಹನಿ ನೀರಾವರಿ ಘಟಕ ನಿರ್ವಹಣೆ ಕುರಿತು ಮಾಹಿತಿ ಪಡೆಯಲು ಪ್ರತಿ ಸಂಸ್ಥೆಯವರು Toll-free ನಂಬರ್‌ಗಳನ್ನು ಹೊಂದಿರಬೇಕಾಗಿರುತ್ತದೆ. Service Centre ಗಳ ಹಾಗೂ Toll-free ನಂಬರಗಳ ವಿವರವನ್ನು ರೈತರಿಗೆ ಹಾಗೂ ತಾಂತ್ರಿಕ ಸೇವಾ ಕೇಂದ್ರ ಕಛೇರಿಗಳಿಗೆ ಸಹಾಯಧನಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀಡಬೇಕಾಗಿರುತ್ತದೆ.
11. ಗ್ಯಾರೆಂಟಿ/ ವಾರೆಂಟಿ ಪ್ರಮಾಣ ಪತ್ರ (ನಮೂನೆ-07ನ್ನು ಅನುಬಂಧ-11 ರಲ್ಲಿ ನೀಡಲಾಗಿದೆ)
12. ಕಂಪನಿ/ಸಂಸ್ಥೆಯವರು ಘಟಕ ಅಳವಡಿಕೆ ಮಾಡುವಾಗ ಪರಿಶೀಲಿಸಬೇಕಾದ ಅಂಶಗಳ ಕುರಿತು ಮಾಹಿತಿಯನ್ನು (ನಮೂನೆ-16ನ್ನು ಅನುಬಂಧ-18ರಲ್ಲಿ ನೀಡಲಾಗಿದೆ) ಸಲ್ಲಿಸುವುದು.
13. ಫಲಾನುಭವಿವಾರು e-way ಬಿಲ್ಲು ಕಡ್ಡಾಯವಾಗಿ ಕಂಪನಿರವರು ಸಲ್ಲಿಸತಕ್ಕದ್ದು (ಮೊತ್ತದ ಮಿತಿ ಇರುವುದಿಲ್ಲ)

**XI. ಅರ್ಜಿದಾರರು ಕಂಪನಿ/ಸಂಸ್ಥೆರವರು ನೀಡಿದ ಎಲ್ಲಾ ದಾಖಲಾತಿಗಳಿಗೆ ಸಹಿ ಮಾಡಿ ಇವುಗಳೊಡನೆ ಈ ಕೆಳಕಂಡ ದಾಖಲಾತಿಗಳನ್ನು ತ್ರಿಪ್ರತಿಗಳಲ್ಲಿ ಕಾರ್ಯಾದೇಶ ಪಡೆದ ನಿಗದಿತ ದಿನಾಂಕದೊಳಗಾಗಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು.**

1. ಬ್ಯಾಂಕ್‌ನಿಂದ ಪಡೆದ ಸಾಲದ ವಿವರಗಳು (ಹನಿ ನೀರಾವರಿ ಅಳವಡಿಕೆಗಾಗಿ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದಲ್ಲಿ)
2. ಕಂಪನಿ/ಸಂಸ್ಥೆಯವರು ತೃಪ್ತಿಕರವಾಗಿ ಹನಿ ನೀರಾವರಿ ಘಟಕ ಅಳವಡಿಸಿರುವ ಬಗ್ಗೆ ಪ್ರಮಾಣ ಪತ್ರ **(ನಮೂನೆ-05ನ್ನು ಅನುಬಂಧ-09 ರಲ್ಲಿ ನೀಡಲಾಗಿದೆ)**.
3. ಹನಿ ನೀರಾವರಿ ಘಟಕವನ್ನು ಸದ್ಬಳಕೆ ಮಾಡುವ ಹಾಗೂ ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ ರೂ.20/-ಗಳ ಛಾಪಾ ಕಾಗದದಲ್ಲಿ ಘೋಷಣೆ **(ನಮೂನೆ-8ನ್ನು ಅನುಬಂಧ-12ರಲ್ಲಿ ನೀಡಲಾಗಿದೆ)**
4. ಫಲಾನುಭವಿವಾರು e-way ಬಿಲ್ಲು ಕಡ್ಡಾಯವಾಗಿ ಕಂಪನಿರವರು ಸಲ್ಲಿಸತಕ್ಕದ್ದು (ಮೊತ್ತದ ಮಿತಿ ಇರುವುದಿಲ್ಲ)
5. ಒಂದು ವೇಳೆ ರೈತರು ಹನಿ ನೀರಾವರಿ ಘಟಕ ಅಳವಡಿಸಲು ಪೂರ್ಣ ಹಣ ಭರಿಸದೇ ತನ್ನ ಬಾಬ್ತಿನ ಹಣ ಮಾತ್ರ ಪಾವತಿಸಿ, ನಿರಾಕ್ಷೇಪಣಾ ಪತ್ರ (No-objection certificate) **(ನಮೂನೆ-11 ಅನುಬಂಧ-16ರಲ್ಲಿ ನೀಡಲಾಗಿದೆ)** ವನ್ನು ನೀಡಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಸಮ್ಮುಖದಲ್ಲಿ ಸಹಿ ಮಾಡಿ ಸಲ್ಲಿಸುವುದು. ಸಂಬಂಧಿಸಿದ ಕಂಪನಿ/ಸಂಸ್ಥೆಯವರ ಬ್ಯಾಂಕ್ ಖಾತೆ ಸಂಖ್ಯೆ, ಖಾತೆಯ ವಿವರ (IFSC Code ನೊಂದಿಗೆ)ವನ್ನು ನಮೂದಿಸಿರುವುದು.

## XII ಸಹಾಯಧನ ಕಡತ ಹಾಗೂ ತಾಕು ಪರಿಶೀಲನೆ (ಅಧಿಕಾರಿಗಳು):

1. ಕಂಪನಿ/ಸಂಸ್ಥೆಗಳು ನೀಡುವ ವಿವರಗಳನ್ನು ವಹಿಯಲ್ಲಿ ದಾಖಲು ಮಾಡಿ(ನಮೂನೆ-09ನ್ನು ಅನುಬಂಧ-06ರಲ್ಲಿ ನೀಡಲಾಗಿದೆ) ಸ್ವೀಕೃತ ಪತ್ರವನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ನೀಡುವುದು ಹಾಗೂ Checklist ಪ್ರಕಾರ ದಾಖಲಾತಿಗಳನ್ನು ಪರಿಶೀಲಿಸುವುದು. ಕಂಪನಿಗಳು ಸಲ್ಲಿಸಿದ್ದ ದಾಖಲಾತಿಗಳ ಕೊರತೆ ಇದ್ದಲ್ಲಿ ಕಡತವನ್ನು

ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು/ ರೇಷ್ಮೆ ಉಪನಿರ್ದೇಶಕರು ಜಿಲ್ಲಾ ಪಂಚಾಯತ್ ರವರ ಗಮನಕ್ಕೆ ತಂದು ಹಿಂದಿರುಗಿಸುವುದು ತಾಲ್ಲೂಕು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ. ಇದರಂತೆ ಜೇಷ್ಠತೆಯನ್ನು ಪರಿಗಣಿಸುವುದು.

2. ಅರ್ಜಿದಾರರು ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಈ ಹಿಂದೆ ನೋಂದಣಿ ಸಮಯದಲ್ಲಿ ಸಲ್ಲಿಸಿದ ದಾಖಲಾತಿಗಳೊಂದಿಗೆ ಸೇರಿಸಿ ಕಡತ ನಿರ್ವಹಿಸುವುದು.
3. ನಂತರ ಸಂಬಂಧಪಟ್ಟ ಅಧಿಕಾರಿಗಳು ಹನಿ ನೀರಾವರಿ ಘಟಕ ಅಳವಡಿಸಿರುವ ತಾಕನ್ನು Inspection kit ನೊಂದಿಗೆ ( Inspection kit ರಲ್ಲಿ – digital screw gauge-OD/ID test, dial gauge-thickness and Go-no-go gaugeಗಳನ್ನು ಹೊಂದಿರಬೇಕು)ತಪಾಸಣೆ ಮಾಡುವುದು. ಅದಕ್ಕೆ ಸಂಬಂಧಿಸಿದಂತೆ ತಪಾಸಣಾ ವರದಿಯಲ್ಲಿ ನಮೂದಿಸುವುದು.(ನಮೂನೆ–9, ಅನುಬಂಧ - 13)
4. ವಿನ್ಯಾಸ ಮತ್ತು ಬಿಲ್‌ನಲ್ಲಿ ನೀಡಿದ ಪರಿಮಾಣದಲ್ಲೇ ತಾಕಿನಲ್ಲಿ ಘಟಕ ಅಳವಡಿಸಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸಿ ದೃಢೀಕರಿಸುವುದು (ಪರಿಶೀಲನಾ ಅಧಿಕಾರಿಗಳಿಂದ).
5. ಹನಿ ನೀರಾವರಿ ಘಟಕದಲ್ಲಿ ಅಳವಡಿಸಿದ ಸಾಮಗ್ರಿಗಳು BIS ಗುಣಮಟ್ಟದಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು (ISI mark). CML ಸಂಖ್ಯೆ , Batch number, ಉತ್ಪಾದನಾ ದಿನಾಂಕ ವಿವರಗಳನ್ನು ತಪಾಸಣಾ ನಮೂನೆಯಲ್ಲಿ ನಮೂದಿಸುವುದು.
6. ಬೆಳೆ ಹಾಗೂ ಬೆಳೆಯ ಅಂತರ, ಲ್ಯಾಟರಲ್ ಹಾಗೂ ಎಮಿಟರ್ ಗಳ ಪರಿಮಾಣ ಹಾಗೂ ಅಂತರವನ್ನು ಪರಿಶೀಲಿಸಿ, ನಮೂದಿಸುವುದು.
7. ಹನಿ ನೀರಾವರಿ ಘಟಕವು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಾತರಿಪಡಿಸಿಕೊಳ್ಳುವುದು. (ಎಲ್ಲಾ ಹನಿಕೆಗಳಲ್ಲಿ ಸಮನಾಗಿ ನೀರು ಪ್ರವಹಿಸುತ್ತಿರುವ ಬಗ್ಗೆ ಪರಿಶೀಲಿಸುವುದು, ಶೇ.10ಕ್ಕಿಂತ ಕಡಿಮೆ ವ್ಯತ್ಯಾಸ ಇದ್ದಲ್ಲಿ ಪರಿಗಣಿಸುವುದು)
8. ಹನಿ ನೀರಾವರಿ ಘಟಕ ಅಳವಡಿಸಿದ ಬೆಳೆಯ ತಾಕಿನಲ್ಲಿ ಅರ್ಜಿದಾರರು/ಕುಟುಂಬ ಸದಸ್ಯರೊಡನೆ ಪರಿಶೀಲನಾ ಅಧಿಕಾರಿಗಳು ಸೇರಿದಂತೆ ಇರುವ post-inspection GPS ಫೋಟೊವನ್ನು ತೆಗೆಯುವುದು.
9. ಅಧಿಕಾರಿಗಳು ತಾಕು ಪರಿಶೀಲನೆ ಮಾಡಿರುವ ಬಗ್ಗೆ Check Measurement ನಲ್ಲಿ ಕಡ್ಡಾಯವಾಗಿ ನಮೂದಿಸುವುದು ಹಾಗೂ ಎಲ್ಲಾ ಹಂತದ ಅಧಿಕಾರಿಗಳು ವಹಿಯನ್ನು ನಿರ್ವಹಿಸತಕ್ಕದ್ದು.
10. ಸಹಾಯಧನ ಲೆಕ್ಕಾಚಾರ ಮಾಡುವಾಗ ವಿನ್ಯಾಸದಲ್ಲಿ, ಬಿಲ್ಲಿನಲ್ಲಿ, ಭಾರತ ಸರ್ಕಾರದ ಮಾರ್ಗಸೂಚಿಯ ಪ್ರಕಾರ ವಿವಿಧ ಅಂತರಗಳಲ್ಲಿ ವಿವಿಧ ವಿಸ್ತೀರ್ಣಕ್ಕೆ ಅಗತ್ಯವಿರುವ ಪರಿಕರಗಳ ಅಂದಾಜು ಪ್ರಮಾಣ ಹಾಗೂ ತಾಕುವಿನಲ್ಲಿ ನೈಜವಾಗಿ ಅಳವಡಿಸಿದ ವಿವಿಧ ಪರಿಕರಗಳ ಪ್ರಮಾಣ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸಿ ಇಲಾಖೆ ನಿಗದಿಪಡಿಸಿದ ದರಗಳನ್ನಾಧಾರಿಸಿ ಶೇಕಡಾವಾರು ಸಹಾಯಧನವನ್ನು ಲೆಕ್ಕಾಚಾರ ಮಾಡುವುದು. ಅದನ್ನು ಭಾರತ ಸರ್ಕಾರ ಸೂಚಿಸಿರುವ ಆಯಾ ಅಂತರದ (ಲ್ಯಾಟರಲ್ಸ್ ಮತ್ತು ಎಮಿಟರ್ ಗಳ ಅಂತರ) ಹಾಗೂ ವಿಸ್ತೀರ್ಣಕ್ಕೆ ನೀಡಲಾದ ಘಟಕ ವೆಚ್ಚದ ಮಿತಿಯೊಳಗೆ (Indicative cost) ಪರಿಗಣಿಸಿ ಸಹಾಯಧನ ಪ್ರಮಾಣವನ್ನು ನಿರ್ಧರಿಸುವುದು (ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು). ಅಂತರ ಬೆಳೆಗಳು ಇದ್ದಲ್ಲಿ ಹಿಪ್ಪುನೇರಳೆ ಬೆಳೆಗೆ ಹನಿ ನೀರಾವರಿ ಅಳವಡಿಸಿದ್ದನ್ನು ಲೆಕ್ಕಾಚಾರ ಮಾಡಿ ಭಾರತ ಸರ್ಕಾರವು

ನಿಗದಿಪಡಿಸಿದ ಮಿತಿಗೆ ಒಳಪಟ್ಟು ಸಹಾಯಧನ ಪರಿಗಣಿಸುವುದು. PMKSY- ಹನಿ ನೀರಾವರಿ ಯೋಜನೆಯಡಿ ಭಾರತ ಸರ್ಕಾರವು ವಿವಿಧ ಅಂತರ ಹಾಗೂ ವಿವಿಧ ಪ್ರದೇಶಕ್ಕೆ ನೀಡಿರುವ Indicative cost ಪ್ರಕಾರ ಪಾವತಿಸಬಹುದಾದ ಗರಿಷ್ಠ ಸಹಾಯಧನ ಕುರಿತು ಲೆಕ್ಕಾಚಾರ ಬಗ್ಗೆ ಅನುಬಂಧ–14ರಲ್ಲಿ ನೀಡಲಾಗಿದೆ. ಅದರಂತೆ ಕ್ರಮವಹಿಸುವುದು. ವಿವಿಧ ಅಂತರ ಹಾಗೂ ವಿಸ್ತೀರ್ಣಕ್ಕೆ ಘಟಕ ವೆಚ್ಚವು **ಅನುಬಂಧ-02**ರಲ್ಲಿ ನೀಡಲಾಗಿದೆ.

11. **ಸಹಾಯಧನಕ್ಕಾಗಿ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರವರಿಗೆ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರರವರು** ನಿಗದಿತ ಅವಧಿಯೊಳಗೆ ಶಿಫಾರಸ್ಸು ಮಾಡುವುದು. **(ನಮೂನೆ-9ನ್ನು ಅನುಬಂಧ-13ರಲ್ಲಿ ನೀಡಲಾಗಿದೆ)**

12. **ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು** ತಾಕು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಕಡತದಲ್ಲಿ ನಿಗದಿತ ಅವಧಿಯೊಳಗೆ ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರಿಗೆ ಶಿಫಾರಸ್ಸು ಮಾಡುವುದು. **(ನಮೂನೆ-9ನ್ನು ಅನುಬಂಧ-13ರಲ್ಲಿ ನೀಡಲಾಗಿದೆ)**

13. ರೇಷೆ ಉಪ ನಿರ್ದೇಶಕರು (ಜಿಪಂ)ರವರು ತಾಕು ಹಾಗೂ ದಾಖಲಾತಿಗಳನ್ನು ನಿಗದಿತ ಅವಧಿಯೊಳಗೆ ಪರಿಶೀಲಿಸಬೇಕಾಗಿರುತ್ತದೆ **(ನಮೂನೆ-9ನ್ನು ಅನುಬಂಧ-13ರಲ್ಲಿ ನೀಡಲಾಗಿದೆ**

**<u>ಸೂಚನೆ:</u> ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು 07 ದಿನಗಳ ಒಳಗಾಗಿ ತಾಕು ಪರಿಶೀಲನೆ ಮಾಡುವುದು(Post-inspection) . ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ತಾಕನ್ನು ಪರಿಶೀಲಿಸಿ, ಸಹಾಯಧನವನ್ನು ಮುಂದಿನ ಹಂತದ ಅಧಿಕಾರಿರವರಿಗೆ ನಿಯಾಮನುಸಾರ ಶಿಫಾರಸ್ಸು ಮಾಡುವುದಲ್ಲದೇ, ಪರಿಶೀಲನೆ ಕೈಗೊಳ್ಳದೇ ಇರುವ ಅಧಿಕಾರಿಯ ಮೇಲೆ ಶಿಸ್ತು ಕ್ರಮಕ್ಕಾಗಿ ಶಿಫಾರಸ್ಸು ಮಾಡುವುದು.**

14. ಇಲಾಖೆಯಿಂದ ನೀಡಲಾದ ಆರ್ಥಿಕ ಪ್ರತ್ಯಾಧಿಕಾರದ ಅನ್ವಯ ಸಹಾಯಧನವನ್ನು ಮಂಜೂರು ಮಾಡುವುದು. ಅದರ ಒಂದು ಪ್ರತಿಯನ್ನು ಕಡತದಲ್ಲಿರಿಸಿ ರೇಷ್ಮೆ ಉಪನಿರ್ದೇಶಕರು/**ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರ ಮೂಲಕ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳ** ಕಛೇರಿಗೆ ಕಡತವನ್ನು ಹಿಂದಿಗಿಸಬೇಕಾಗಿರುತ್ತದೆ

15. **ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರರವರು** ಇದೇ ಕಡತದಲ್ಲಿ ಸಾದಿಲ್ವಾರು ಬಿಲ್ಲನ್ನು ಸಿದ್ಧಪಡಿಸಿ, ಕಡತದ ಸಮೇತ ಮೇಲು ಸಹಿಗಾಗಿ ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರ ಕಛೇರಿಗೆ ಸಲ್ಲಿಸಬೇಕು.

16. ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರು ನಿಯಮಾನುಸಾರ ಸಾದಿಲ್ವಾರು ಬಿಲ್ಲುಗಳಿಗೆ ಮೇಲು ಸಹಿ ಮಾಡುವುದು. (ಬಿಲ್ಲಿನ ಒಂದು ಪ್ರತಿಯನ್ನು ಕಛೇರಿಯ ಕಡತದಲ್ಲಿ ನಿರ್ವಹಿಸುವುದು)

17. ಮೂಲ ಕಡತವನ್ನು ಮೇಲು ಸಹಿ ಮಾಡಿದ ಸಾದಿಲ್ವಾರು ಬಿಲ್ಲಿನೊಂದಿಗೆ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರರವರಿಗೆ ಹಿಂದಿರುಗಿಸುವುದು.

18. ರೇಷ್ಮೆ ಉಪ ನಿರ್ದೇಶಕರು (ಜಿಪಂ) ಹಾಗೂ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು, ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು ರೈತರು ಘಟಕದ ಪೂರ್ಣ ವೆಚ್ಚ ಭರಿಸಿದ್ದಲ್ಲಿ,

DBT ಖಜಾನೆ-2 ಮುಖಾಂತರ ಅರ್ಜಿದಾರರು ಹೊಂದಿದ ಆಧಾರ್ ಲಿಂಕ್ಡ್ ಬ್ಯಾಂಕ್ ಖಾತೆಗೆ ಸಹಾಯಧನ ಸಂದಾಯ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

19. ರೈತ ಫಲಾನುಭವಿ ಹನಿ ನೀರಾವರಿ ಘಟಕ ಅಳವಡಿಸಲು ಸಾಲ ಪಡೆದಿದ್ದಲ್ಲಿ ಸದರಿ ಫಲಾನುಭವಿಗಳ ಸಾಲದ ಖಾತೆಗೆ ಜಮಾ ಮಾಡಲು ಕ್ರಮವಹಿಸುವುದು (ಇತರೆ ಯಾವುದೇ ರೀತಿಯ ಸಾಲಗಳಿಗೆ ಸರಿದೂಗಿಸಬಾರದು).

20. ರೈತರು ಹನಿ ನೀರಾವರಿ ಘಟಕವನ್ನು ಅಳವಡಿಸಲು ಪೂರ್ಣ ಹಣ ಭರಿಸಲು ಸಾಧ್ಯವಾಗದೇ ಇದ್ದ ಸಂದರ್ಭದಲ್ಲಿ ಹಾಗೂ ರೈತರ ಬಾಬ್ತಿನ ಹಣ ಮಾತ್ರ ಪಾವತಿಸಿ, ನಿರಾಕ್ಷೇಪಣಾ ಪತ್ರ [(No-objection Certificate) (ನಮೂನೆ-11ನ್ನು ಅನುಬಂಧ-16ರಲ್ಲಿ ನೀಡಲಾಗಿದೆ) ವನ್ನು ರೇಷ್ಮೆ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಸಹಿ ಮಾಡಿ ನೀಡಿದ್ದಲ್ಲಿ, ಸಹಾಯಧನ ಮೊತ್ತವನ್ನು ಘಟಕ ಅಳವಡಿಸಿದ ಕಂಪನಿ/ಸಂಸ್ಥೆಗೆ ಪಾವತಿಸಬಹುದು.

21. ಕಾಯಾದೇಶ ನೀಡಿದಾಗ, Pre-sanction order ನೀಡಿದಾಗ, ಮಂಜೂರಾತಿ ಆದೇಶ ಹೊರಡಿಸಿದಾಗ ಹಾಗೂ ಸಹಾಯಧನ ಪಾವತಿಸಲಾದ ಮೊತ್ತದ ವಿವರ SMS ಮೂಲಕ ಹಾಗೂ ಲಿಖಿತ ರೂಪದಲ್ಲಿ ಫಲಾನುಭವಿಗೆ ಕಡ್ಡಾಯವಾಗಿ ತಿಳಿಸುವುದು..

## XIII. Penalty Clause:-

ರೈತರಿಗೆ ಹನಿ ನೀರಾವರಿ ಘಟಕದ ಅನುಷ್ಠಾನದ ಕುರಿತು ಸಮಸ್ಯೆಗಳು ಬಂದಲ್ಲಿ, ರೈತರಿಗೆ ಅಗತ್ಯ ಮಾಹಿತಿ ನೀಡದೇ ಇದ್ದಲ್ಲಿ, ವಿನ್ಯಾಸದಲ್ಲಿ ಯಾವುದೇ ಲೋಪದೋಷಗಳು ಉಂಟಾದಲ್ಲಿ, ಘಟಕ ಅಳವಡಿಕೆ ಹಾಗೂ ದಾಖಲಾತಿಗಳಲ್ಲಿ ಯಾವುದೇ ಲೋಪದೋಷಗಳು ಇದ್ದಲ್ಲಿ, ನಿಗದಿತ ಅವಧಿಯೊಳಗೆ ದಾಖಲಾತಿಗಳು ಸಲ್ಲಿಸದೇ ಇದ್ದಲ್ಲಿ, ಗುಣಮಟ್ಟದ ಉಪಕರಣಗಳನ್ನು ಅಳವಡಿಸದೇ ಇದ್ದಲ್ಲಿ, ಸರಿಯಾದ ನಿರ್ವಹಣೆ ಕೈಗೊಳ್ಳದಿದ್ದಲ್ಲಿ ಹಾಗೂ ಸಹಾಯವಾಣಿ ಮತ್ತು Service centers ಗಳು ಕಾರ್ಯರೂಪದಲ್ಲಿ ಇಲ್ಲದಿದ್ದಲ್ಲಿ ಅಂತಹ ಕಂಪನಿ/ಸಂಸ್ಥೆಯ ವಿರುದ್ಧ ನೋಂದಣಿ ಪ್ರಪತ್ರದ ಷರತ್ತು ಮತ್ತು ನಿಬಂಧನೆಗಳನ್ವಯ ಹಾಗೂ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ನಿಯಾಮನುಸಾರ ಕಪ್ಪುಪಟ್ಟಿಗೆ ಸೇರಿಸಲು ಅಗತ್ಯ ಕ್ರಮವಹಿಸಲಾಗುವುದು.

ಕಂಪನಿ/ಸಂಸ್ಥೆಯವರು ಕಡ್ಡಾಯವಾಗಿ ಘಟಕ ನಿರ್ವಹಣೆ ಬಗ್ಗೆ User manualನನ್ನು ಸ್ಥಳೀಯ ಭಾಷೆಯಲ್ಲಿ ಮುದ್ರಿಸಿ ಫಲಾನುಭವಿಗೆ ನೀಡಬೇಕಾಗಿರುತ್ತದೆ.

## XIV. ಅನುದಾನ ವಿನಿಯೋಗ ಪ್ರಮುಖಾಂಶಗಳು:-

1) 2021-22ನೇ ಸಾಲಿಗೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ (PMKSY) ಹನಿ ನೀರಾವರಿ ಕಾರ್ಯಕ್ರಮದಡಿ ಜಿಲ್ಲಾವಾರು ನಿಗದಿಪಡಿಸಿದ ಅನುದಾನದಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು ರೇಷ್ಮೆ ನಿರ್ದೇಶನಾಲಯದಿಂದ ಅನುಮತಿ ಪಡೆಯದೆ ಮಾಡತಕ್ಕದ್ದಲ್ಲ.

2) ಕ್ರಿಯಾಯೋಜನೆ ಪ್ರಕಾರ ವಿವಿಧ ಪ್ರದೇಶ, ವಿವಿಧ ವರ್ಗ (ಸಣ್ಣ/ ಅತೀ ಸಣ್ಣ ರೈತರು ಮತ್ತು ಇತರರು) ಹಾಗೂ ವಿವಿಧ ಘಟಕಗಳನ್ವಯ (ಹನಿ ನೀರಾವರಿ) ಭೌತಿಕ ಹಾಗೂ ಆರ್ಥಿಕ ಗುರಿಗಳ ಪ್ರಕಾರವೇ

ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ಯಾವುದೇ ರೀತಿಯ ಬದಲಾವಣೆಗೆ ರೇಷ್ಮೆ ನಿರ್ದೇಶನಾಲಯದ ಅನುಮತಿ ಪಡೆಯತಕ್ಕದ್ದು.

3) ಈ ಯೋಜನೆಯನ್ನು ಜಿಲ್ಲಾಮಟ್ಟದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಲ್ಲಿ (District Level Implementation Committee-DLIC) ಅನುಮೋದನೆಯಾಗುವ ಜಿಲ್ಲಾ ನೀರಾವರಿ ಯೋಜನೆ (District Irrigation Plan-DIP)ಯಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

**XV ಆರ್ಥಿಕ ಪ್ರತ್ಯಾಯೋಜನೆ (Delegation of Power) :**

ಈ ಯೋಜನೆಯಡಿ 5.00 ಹೆಕ್ಟೇರ್ ವರೆಗಿನ ಹನಿ ನೀರಾವರಿ ಸಹಾಯಧನವನ್ನು ಮಾರ್ಗಸೂಚಿಯಂತೆ ಫಲಾನುಭವಿಗೆ ಮಂಜೂರು ಮಾಡಲು ಇಲಾಖೆಯಿಂದ ನೀಡಲಾದ ಆರ್ಥಿಕ ಪ್ರತ್ಯಾಯೋಜನೆಯನ್ವಯ ಕ್ರಮವಹಿಸುವುದು.

**XVI. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು** (Reporting and documentation).

1) ರೇಷ್ಮೆ ಉಪ ನಿರ್ದೇಶಕರು ಹಾಗೂ ರೇಷ್ಮೆ ಸಹಾಯಕ ನಿರ್ದೇಶಕರು/ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ರಾಜ್ಯ ಸರ್ಕಾರದ New Decision Support System (NDSS) ತಂತ್ರಾಂಶದಲ್ಲಿ ಜಿಲ್ಲಾವಾರು ಗುರಿಗಳು, ಬಿಡುಗಡೆ ಹಾಗೂ ಪ್ರಗತಿಯನ್ನು ನಿಯಮಿತವಾಗಿ ಕಡ್ಡಾಯವಾಗಿ ದಾಖಲಿಸುವುದು.
2) ಪ್ರತಿ ಮಾಹೆಯ ಜಿಲ್ಲಾವಾರು ಹಾಗೂ ಕ್ರೂಢೀಕೃತ ಪ್ರಗತಿ ವರದಿಯನ್ನು ಖಜಾನೆ–2 ಪ್ರಕಾರ ನಿಗದಿತ ನಮೂನೆಗಳಲ್ಲಿ ರೇಷ್ಮೆ ನಿರ್ದೇಶನಾಲಯಕ್ಕೆ ಇ–ಮೇಲ್ ಮುಖಾಂತರ ಪ್ರತಿ ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು.
3) ಅಂತಿಮ ಪ್ರಗತಿ ವರದಿಯನ್ನು ಜಿಲ್ಲಾವಾರು, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ರೇಷ್ಮೆ ನಿರ್ದೇಶನಾಲಯಕ್ಕೆ ದಿನಾಂಕ: 05–04–2021ರ ಒಳಗಾಗಿ ತಪ್ಪದೇ ಸಲ್ಲಿಸುವುದು.
4) ವರ್ಷಾಂತ್ಯದಲ್ಲಿ ಖಜಾನೆ–2 ಪ್ರಕಾರ ಭರಿಸಿದ ವೆಚ್ಚವನ್ನು ಲೆಕ್ಕಾ ತಪಾಸಣೆ ಮಾಡಿಸಿ, ದೃಢೀಕೃತ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರ (GFR-12C Format ಅನ್ನು ಅನುಬಂಧ–03ರಲ್ಲಿ ನೀಡಲಾಗಿದೆ) ವನ್ನು ವರ್ಷಾಂತ್ಯದ ಒಂದು ತಿಂಗಳ ಒಳಗಾಗಿ ಸಲ್ಲಿಸುವುದು.

**XVII ಗಮನಿಸಬೇಕಾದ ಅಂಶಗಳು:**

**1. ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವ ಫಲಾನುಭವಿಯನ್ನು ಗುರುತಿಸುವಲ್ಲಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಹಾಗೂ ಕಂಪನಿ/ಸಂಸ್ಥೆಗಳು ವೈಯಕ್ತಿಕ ಗಮನಹರಿಸಿ ಸಹಾಯಧನವು ದುರುಪಯೋಗವಾಗದಂತೆ ಖಾತರಿ ಪಡಿಸಿಕೊಳ್ಳುವುದು.**

**2.**ಭಾರತ ಸರ್ಕಾರದ ಮಾರ್ಗಸೂಚಿಯನ್ವಯ "the OI activities must be linked with Micro Irrigation to make potential use of the available funds for higher water use efficiency" ಎಂದು ತಿಳಿಸಲಾಗಿರುತ್ತದೆ. ಅದರಂತೆ ಜಲಾನಯನ ಅಭಿವೃದ್ಧಿಇಲಾಖೆ ಅಥವಾ ತೋಟಗಾರಿಕೆ ಇಲಾಖೆಯಿಂದ

ನೀಡಲಾಗಿರುವ ಕೃಷಿ ಹೊಂಡಗಳನ್ನು ಉಪಯೋಗಿಸಿಕೊಂಡು ಹನಿ ನೀರಾವರಿ ಮೂಲಕ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

3. ರೈತರು 1.00 ಹೆಕ್ಟೇರ್ ಪ್ರದೇಶದವರೆಗೂ ತಾಕುವಿನಲ್ಲಿ ಲ್ಯಾಟರಲ್ 12mm ಹಾಗೂ 16mm emitting pipe ಅಳವಡಿಸಬಹುದು.
4. ಎಲ್ಲಾ ವರ್ಗದ ರೈತ ಫಲಾನುಭವಿಗಳು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. SCSP ಹಾಗೂ TSP ಘಟಕಗಳ ಗುರಿಯಂತೆ ಕಡ್ಡಾಯವಾಗಿ ಸಂಬಂಧಪಟ್ಟ ವರ್ಗದ ರೈತರಿಗೆ ಸಹಾಯಧನ ನೀಡುವುದು. ಮಹಿಳೆಯರಿಗೆ ನಿಯಮಾನುಸಾರ ಆದ್ಯತೆ ನೀಡುವುದು ಹಾಗೂ ಮಹಿಳೆಯರಿಗೆ ಒಟ್ಟು ಅನುದಾನದ ಶೇ.30ರಷ್ಟು ಮೀಸಲಿಡುವುದು. ಸಣ್ಣ/ಅತಿ ಸಣ್ಣ ರೈತರಿಗೆ ಕನಿಷ್ಟ ಶೇ.50ರಷ್ಟು ಅನುದಾನವನ್ನು ಮೀಸಲಿಡುವುದು ಹಾಗೂ ಅದರಂತೆ ಪ್ರಗತಿ ಸಾಧಿಸುವುದು.
5. ಜಿಲ್ಲೆಯ ರೇಷ್ಮೆ ಉಪ ನಿರ್ದೇಶಕರು (ಜಿಪಂ) ಹಾಗೂ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ಮತ್ತು ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಕ ಸೇವಾ ಕೇಂದ್ರ ರವರು ಕೇಂದ್ರ ಪುರಸ್ಕೃತ ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಹೆಚ್ಚಿನ ಪ್ರಚಾರ ಕೈಗೊಳ್ಳುವುದು.
6. SCSP ಹಾಗೂ TSP ಫಲಾನುಭವಿಗೆ ವಿವಿಧ ನಿಗಮ ಮತ್ತು ಮಂಡಳಿಗಳಿಂದ ಕೊಳವೆ ಬಾವಿ ಕೊರೆಸಿ ವಿದ್ಯುದ್ದೀಕರಣಗೊಳಿಸಿದ ಫಲಾನುಭವಿಗಳ ಪಟ್ಟಿಯನ್ನು ಪಡೆದು ಘಟಕ ಅಳವಡಿಕೆಗೆ ಪ್ರೋತ್ಸಾಹ ನೀಡಿ ಜಿಲ್ಲೆಗಳಿಗೆ ನಿಗದಿಯಾಗಿರುವ ಗುರಿಗೆ ಸಂಪೂರ್ಣ ಪ್ರಗತಿ ಸಾಧಿಸುವುದು.
7. ಅರ್ಜಿದಾರರು "ರೇಷ್ಮೆ ರೈತ ಉತ್ಪಾದಕರ ಸಂಸ್ಥೆ" " [Farmers' Producer Organization (FPO)] ಮತ್ತು "ಆಸಕ್ತ ರೇಷ್ಮೆ ಬೆಳೆಗಾರರ ಗುಂಪು" [Farmers' Interest Group (FIG)] ಸದಸ್ಯರಿಗೆ ಆದ್ಯತೆ ನೀಡುವುದು.
8. ಪ್ರತಿ ರೈತ ಫಲಾನುಭವಿಯು, ಈ ಹಿಂದೆ ಸಹಾಯಧನ ಪಡೆದಿದ್ದಲ್ಲಿ ಅದನ್ನೂ ಸೇರಿದಂತೆ, ಗರಿಷ್ಠ 5.00 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.
9. **ದಿ:11-08-2020ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳುರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ 7 ವರ್ಷಗಳ ನಂತರ ಅದೇ ಜಮೀನಿಗೆ ಸಹಾಯಧನ ಪಡೆಯುವ ಬಗ್ಗೆ ಚರ್ಚಿಸಲಾಗಿ, ಹೊಸ ಫಲಾನುಭವಿಗಳಿಗೆ ಮಾತ್ರ ಸಹಾಯಧನ ನೀಡಬಹುದು ಎಂದು ತೀರ್ಮಾನಿಸಲಾಗಿರುತ್ತದೆ. ಅದರಂತೆ ಕ್ರಮವಹಿಸುವುದು.**
10. ಸಹಾಯಧನ ಪಾವತಿ ಮಾಡುವಾಗ ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ಇತರೆ ರೈತರ ವರ್ಗಕ್ಕೆ ಸೇರಿರುವ ಬಗ್ಗೆ ಖಾತರಿಪಡಿಸಿಕೊಂಡು, ತಿಳಿಸಿರುವ ಅನುಪಾತದಂತೆ ಸಹಾಯಧನ ನೀಡಲು ಕ್ರಮ ವಹಿಸುವುದು.
11. ಕಾರ್ಯಾದೇಶ ನೀಡುವ ಸಂದರ್ಭದಲ್ಲಿ ಹಿಂದಿನ ಸಾಲಿನಲ್ಲಿ ಬಾಕಿ ಉಳಿದ ಅರ್ಜಿಗಳನ್ನು ಗಮನದಲ್ಲಿ ಇಟ್ಟುಕೊಂಡು ಪ್ರಸಕ್ತ ಸಾಲಿನಲ್ಲಿ ಕಾರ್ಯಾದೇಶ ನೀಡಬೇಕಾಗಿರುತ್ತದೆ, ತಪ್ಪಿದ್ದಲ್ಲಿ, ಇದಕ್ಕೆ ಸಂಬಂಧಪಟ್ಟ ರೇಷ್ಮೆ ಉಪ ನಿರ್ದೇಶಕರು (ಜಿಪಂ) ಹಾಗೂ ಸಂಬಂಧಪಟ್ಟ ಅಧಿಕಾರಿಗಳು ನೇರ ಜವಾಬ್ದಾರಾಗಿರುತ್ತಾರೆ.
12. **ತಾಕು ಪರಿಶೀಲನೆ ಈ ಕೆಳಕಂಡಂತೆ ಇರುವುದು (ಶೇ.ವಾರು): (ನಮೂನೆ-14, ಅನುಬಂಧ-20ರಲ್ಲಿ ದಾಖಲಿಸುವುದು)**
    a. ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ– ಶೇ.100ರಷ್ಟು

b. ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು – ಶೇ.50ರಷ್ಟು

c. ರೇಷ್ಮೆ ಉಪ ನಿರ್ದೇಶಕರು (ಜಿಪಂ) – ಶೇ.10ರಷ್ಟು

d. ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರು – ಶೇ.5ರಷ್ಟು (ಎಲ್ಲಾ ಅಧೀನ ಜಿಲ್ಲೆಗಳು ಸೇರಿದಂತೆ)

e. ನೋಡಲ್ ಅಧಿಕಾರಿಗಳು – ಶೇ.1ರಷ್ಟು (Random ಆಗಿ)

**ಸೂಚನೆ:** ಪರಿಶೀಲನಾ ಅಧಿಕಾರಿಗಳು **Check measurement** ನಮೂನೆಯಲ್ಲಿ ಪರಿಶೀಲನಾ ವಿವರವನ್ನು ನಮೂದಿಸುವುದಲ್ಲದೇ, ಸದರಿರವರ ಪ್ರವಾಸ ದಿನಚರಿಯಲ್ಲಿ ದಾಖಲಿಸುವುದು.

13. ಯೋಜನೆಗೆ ನಿಗಧಿಪಡಿಸಿದ ಅನುಷ್ಠಾನದ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು.

14. ಸಹಾಯಧನ ಪುನರಾವರ್ತನೆ (repeation) ಆದರಂತೆ ಸಹಾಯಧನ ವಿತರಣೆ ಮಾಡುವುದು.

15. ಫಲಾನುಭವಿಯು ತನ್ನ ಜಮೀನಿನಲ್ಲಿ ಹನಿ ನೀರಾವರಿ ಅಳವಡಿಸಿ ಅರ್ಜಿ ಸಲ್ಲಿಸಿದ ನಂತರ ನಿಯಮಾನುಸಾರ ಅನುದಾನ ಲಭ್ಯತೆ ಆಧಾರಿಸಿ ಜೇಷ್ಠತೆ ಮೇರೆಗೆ ಸಹಾಯಧನವನ್ನು ವಿತರಿಸುವುದು. ಈ ಬಗ್ಗೆ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ /ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ಹಾಗೂ ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರು ವೈಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

16. **ಫಲಾನುಭವಿಯು ತನ್ನ ಜಮೀನಿನಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಿದ/ಅರ್ಜಿ ಸಲ್ಲಿಸಿದ ನಂತರ ನಿಯಮಾನುಸಾರ ಅನುದಾನ ಲಭ್ಯತೆ ಆಧಾರಿಸಿ, ಜೇಷ್ಠತೆ ಮೇರೆಗೆ ಸಹಾಯಧನವನ್ನು ವಿತರಿಸುವುದು. ಈ ಬಗ್ಗೆ ಸಂಬಂಧಿಸಿದ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ಹಾಗೂ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ರವರು ವೈಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.**

17. **ತಾಕು ಪರಿಶೀಲನಾ ಸಂದರ್ಭದಲ್ಲಿ ಹನಿ ನೀರಾವರಿ ಪದ್ಧತಿಯನ್ನು ಬಿಲ್ಲಿನಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕೆ ಅಳವಡಿಸಿರುವ ಬಗ್ಗೆ ಖಾತರಪಡಿಸಿಕೊಳ್ಳುವುದು. ಅದರಂತೆ ಸಹಾಯಧನಕ್ಕೆ ಶಿಫಾರಸು ಮಾಡಬೇಕು. ಸಹಾಯಧನ ವಿಸ್ತೀರ್ಣದಲ್ಲಿ ಕೆಲವೊಂದು ಗಿಡಗಳು ಇಲ್ಲದಿದ್ದಲ್ಲಿ, ಗಿಡ ನೆಡುವಿಕೆ ಬಗ್ಗೆ ರೈತರಿಗೆ ಅರಿವು ಮೂಡಿಸುವುದು.**

18. **ಅರ್ಜಿ ವಿಲೇವಾರಿಯ ಪ್ರಕ್ರಿಯೆಯಂತೆ ನಿಗದಿತ ಅವಧಿಯೊಳಗಾಗಿ ಇತ್ಯರ್ಥಪಡಿಸಿ ಸಹಾಯಧನಕ್ಕಾಗಿ ಕ್ರಮವಹಿಸುವುದು.**

19. **ಹನಿ ನೀರಾವರಿ ಘಟಕ್ಕೆ ಸಹಾಯಧನ ಪಡೆದಿರುವ ಬಗ್ಗೆ ಪುರ್ನವರ್ತನೆ (repeatation)ಯನ್ನು ಪರಿಶೀಲಿಸಲು ಕೃಷಿ, ರೇಷ್ಮೆ, ಹಾಗೂ ಇತರೆ ಇಲಾಖೆಗಳಿಂದ No-objection Certificate(NoC)ಯನ್ನು ಪಡೆದು ಖಾತರಿಪಡಿಸಿಕೊಂಡು ನಂತರ ಸಹಾಯಧನ ವಿತರಿಸುವುದು.**

20. **ಕಂಪನಿ/ಸಂಸ್ಥೆಯವರು ನೀಡಲಾದ user manual ರನ್ವಯ ಫಲಾನುಭವಿಯು ಘಟಕ ನಿರ್ವಹಣೆ ಮಾಡಬೇಕಾಗಿರುತ್ತದೆ**

21. **ಘಟಕ ಅಳವಡಿಕೆ ನಂತರ ಫಲಾನುಭವಿಯು ಕಡ್ಡಾಯವಾಗಿ ಘಟಕದ ಉಪಯೋಗವನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಸಹಾಯಧನ ಪಡೆದ ನಂತರ ಘಟಕವನ್ನು ಬೇರೊಂದು ಸ್ಥಳಕ್ಕೆ ವರ್ಗಾಹಿಸುವುದು ಅಥವಾ ಮಾರಾಟ ಮಾಡದಿರುವ ಬಗ್ಗೆ ದೃಡೀಕರಣ ನೀಡಬೇಕಾಗಿರುತ್ತದೆ (ನಮೂನೆ-10 ಅನುಬಂಧ-13ರಲ್ಲಿ).**

22. ಇಲಾಖಾ ಮಾರ್ಗಸೂಚಿಯ ಜೊತೆಗೆ ಕ್ರಮ ಸಂಖ್ಯೆ XVIIIರ ಅಂಶ(8)ನ್ನು ಹೊರತುಪಡಿಸಿ, ಭಾರತ ಸರ್ಕಾರದ ಮಾರ್ಗಸೂಚಿಯನ್ನು (Operational Guidelines of PMKSY) ಪಾಲಿಸುವುದು.

23. ಜಿಲ್ಲೆಗಳಲ್ಲಿ/ ತಾಲ್ಲೂಕುಗಳಲ್ಲಿ ಇಲಾಖೆಯು ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಹಾಗೂ ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಉಲ್ಲಂಘನೆಗೆ ಆಸ್ಪದವಿರುವುದಿಲ್ಲ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

**ಅನುಬಂಧಗಳು:**

| | |
|---|---|
| **ಅನುಬಂಧ-01 :** | ಸರ್ಕಾರದ ಆದೇಶ ಸಂಖ್ಯೆ: ರೇಷ್ಮೆ/43/ರೇಕೃವಿ/2021, ದಿನಾಂಕ 16.4.2021 |
| **ಅನುಬಂಧ-02 :** | Indicative Cost of Drip Irrigation System and various Sprinkler Irrigation Systems for calculation of Subsidy of GOI guidelines |
| **ಅನುಬಂಧ-03 :** | U.C. Format (GFR 12C) |
| **ಅನುಬಂಧ-04 :** | unique code (ಅನನ್ಯ ಸಂಖ್ಯೆ) ನೀಡುವ ವಿಧಾನ |
| **ಅನುಬಂಧ-05 :** | ರೈತರ ನೊಂದಣಿ ಅರ್ಜಿ ಹಾಗೂ ಇಲಾಖೆ ಯೋಜನೆಗಳಡಿ ಸವಲತ್ತುಗಳನ್ನು ಪಡೆಯುವ ನೊಂದಣಿ ಅರ್ಜಿ (ನಮೂನೆ 01.ಅ ಮತ್ತು ನಮೂನೆ 01.ಆ) |
| **ಅನುಬಂಧ-06 :** | ನಮೂನೆ-02 (ನೊಂದಣಿ ಅರ್ಜಿ ಸ್ವೀಕರಿಸಿ ದಾಖಲಿಸುವ ವಹಿ ನಮೂನೆ) ಮತ್ತು ನಮೂನೆ-09 (ಸಹಾಯಧನದ ಅರ್ಜಿ ಸ್ವೀಕರಿಸಿ ದಾಖಲಿಸುವ ವಹಿ ನಮೂನೆ) |
| **ಅನುಬಂಧ-07 :** | ನಮೂನೆ-03 (ಸ್ಥಳ ಪರಿಶೀಲನಾ ವರದಿ-ಕಾರ್ಯ ಮುನ್ನ) |
| **ಅನುಬಂಧ-08 :** | ನಮೂನೆ-04 (ಸಹಾಯಧನ ಅರ್ಜಿ ನಮೂನೆ) |
| **ಅನುಬಂಧ-09 :** | ನಮೂನೆ-05 (ಕೆಲಸ ಪೂರ್ಣಗೊಳಿಸಿರುವ ಬಗ್ಗೆ ದೃಢೀಕರಣ ಹಾಗೂ ಕೆಲಸ ತೃಪ್ತಿಕರವಾಗಿರುವ ಬಗ್ಗೆ ಪ್ರಮಾಣ ಪತ್ರ) |
| **ಅನುಬಂಧ-10 :** | ನಮೂನೆ-06 (ತರಬೇತಿ ನೀಡಿರುವ ಬಗ್ಗೆ ಪ್ರಮಾಣ ಪತ್ರ) |
| **ಅನುಬಂಧ-11:** | ನಮೂನೆ-07 (ಗ್ಯಾರಂಟಿ/ವಾರೆಂಟಿ ಪತ್ರ) |
| **ಅನುಬಂಧ-12 :** | ನಮೂನೆ-08 (ಘೋಷಣಾ ಪತ್ರ) |
| **ಅನುಬಂಧ-13 :** | ನಮೂನೆ-09 (ಸ್ಥಳ ಪರಿಶೀಲನಾ ವರದಿ-ಕಾರ್ಯ ನಂತರ) |
| **ಅನುಬಂಧ-14 :** | Annexure-1 to Annexure-6 ವರೆಗೂ ಹನಿ ನೀರಾವರಿಗೆ GOI Guidelines PMKSY-PDMC (MI) Drip Irrigation Technology- Indicative Bill of Quantities from 0.4 ha. to 5.0 ha. |
| **ಅನುಬಂಧ-15 :** | BIS Standards of GOI Guidelines |
| **ಅನುಬಂಧ-16 :** | ನಮೂನೆ-11 ಕೆಲಸ ಪೂರ್ಣಗೊಂಡ ನಂತರ ಸಂಸ್ಥೆಗೆ ಹಣ ಪಾವತಿಸಬೇಕಾದಲ್ಲಿ, ರೈತರು ನೀಡಬೇಕಾದ NOC ಪತ್ರ |
| **ಅನುಬಂಧ-17 :** | ನಮೂನೆ-12 ಕಂಪನಿ/ಸಂಸ್ಥೆರವರು ಸಹಾಯಧನಕ್ಕಾಗಿ ಕಡತ ನೀಡಿರುವುದಕ್ಕೆ ಸ್ವೀಕೃತಿ ಪತ್ರ (Acknowledgement Letter) |
| **ಅನುಬಂಧ-18 :** | ನಮೂನೆ-16 ಹನಿ ನೀರಾವರಿ ಘಟಕವನ್ನು ಅಳವಡಿಕೆ ಮಾಡುವಾಗ ಪರಿಶೀಲಿಸಬೇಕಾದ ಅಂಶಗಳ ಕುರಿತು ಪತ್ರ. |
| **ಅನುಬಂಧ-19 :** | ನಮೂನೆ-13 Pre Sanction Order |
| **ಅನುಬಂಧ-20 :** | ನಮೂನೆ-14 Check Measurement format |
| **ಅನುಬಂಧ-21 :** | ನಮೂನೆ-15 ಹನಿ ನೀರಾವರಿ ಘಟಕವನ್ನು ನಿರ್ವಹಣೆ ಮಾಡುವ ಬಗ್ಗೆ ಪ್ರಮಾಣ ಪತ್ರ |

**ಕೇಂದ್ರ ಸರ್ಕಾರ ನೀಡಿರುವ Operational Guidelinesನ್ನು ಇದರೊಂದಿಗೆ ಅಡಕಗೊಳಿಸಿದೆ.**

**ಈ ಮಾರ್ಗಸೂಚಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಹಾಗೂ ರಾಜ್ಯ ಸರ್ಕಾರದ ಆದೇಶಗಳಿಗೆ ಅನುಗುಣವಾಗಿ ನೀಡಲಾಗಿದ್ದು, ಸದರಿ ಮಾರ್ಗಸೂಚಿಗಳು ಹಾಗೂ ಆದೇಶಗಳನ್ನು ಪಾಲಿಸುವುದು.**